# ಕುವೆಂಪು ವಿಶ್ವವಿದ್ಯಾಲಯ

# *ಸಿಂಡಿಕೇಟ್ ಸಾಮಾನ್ಯ ಸಭೆಯ*
# ನಡಾವಳಿಗಳು

## ಸಭಾ ದಿನಾಂಕ : 10–11–2022

**(ದಿನಾಂಕ:28–10–2022ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದುವರೆದ ಭಾಗ)**


**ಪ್ರಾಧಿಕಾರಗಳ ವಿಭಾಗ**

**ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451**
**ಶಿವಮೊಗ್ಗ ಜಿಲ್ಲೆ.**

ಫ್ಯಾಕ್ಸ್: 08282-256262
ಇ-ಮೇಲ್:drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1-ಸಿಂ- :386:2022-23 ದಿನಾಂಕ:09-12-2022

ಮಾನ್ಯರೆ,

ವಿಷಯ: ದಿನಾಂಕ:10-11-2022ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:10-11-2022 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾ ಭವನದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಯನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:10-11-2022 ರಂದು ಗುರುವಾರ ಪೂರ್ವಾಹ್ನ :11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

<u>ಹಾಜರಾದ ಸದಸ್ಯರು:</u>

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀಮತಿ ಅನುರಾಧ ಜಿ. ಕೆ.ಎ.ಎಸ್.(ಸೂಪರ್ ಟೈಮ್ ಸ್ಕೇಲ್) ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ರಾಜಶೇಖರ್ ಹೆಬ್ಬಾರ್, ಸಿ., ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ (ಆನ್ ಲೈನ್ ಮತ್ತು ಆಫ್ ಲೈನ್.) | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ (ಆನ್ ಲೈನ್) | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 8. | ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 9. | ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 10. | ಶ್ರೀ ಧರ್ಮಪ್ರಸಾದ್ ಜಿ. | ಸದಸ್ಯರು |
| 11. | ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 12. | ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 13. | ಪ್ರೊ. ರಿಯಾಜ್ ಮಹಮ್ಮೂದ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 14. | ಶ್ರೀ. ಬಿ.ಸಿ. ಬಸವರಾಜಪ್ಪ., ಪ್ರಾಂಶುಪಾಲರು, | ಸದಸ್ಯರು |
| 15. | ಶ್ರೀಮತಿ ಭಾರತಿ, ಪ್ರಾಂಶುಪಾಲರು | ಸದಸ್ಯರು |
| 16. | ಶ್ರೀ ನಟೇಶ್ ಎಸ್. ಎಂ., ಪ್ರಾಂಶುಪಾಲರು | ಸದಸ್ಯರು |
| 17. | ಡಾ. ಧನಂಜಯ ಬಿ.ಜಿ., ಪ್ರಾಂಶುಪಾಲರು | ಸದಸ್ಯರು |

<u>ಗೈರುಹಾಜರಾದ ಸದಸ್ಯರು:</u>

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

<u>ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:</u>

ಯಾರು ಇರುವುದಿಲ್ಲ.

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:10-11-2022 ರಂದು ಗುರುವಾರ ಪೂರ್ವಾಹ್ನ :11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು ಹಾಗೂ ಆನ್‌ಲೈನ್ ಮೂಲಕ ಸಭೆಯಲ್ಲಿ ಸೇರಿಕೊಂಡ ಸದಸ್ಯರುಗಳಾದ ಶ್ರೀ ರಾಜಶೇಖರ್ ಹೆಬ್ಬಾರ್ (ಜಂಟಿ ನಿರ್ದೇಶಕರು) ಮತ್ತು ಶ್ರೀ ನಿರಂಜನ ಮೂರ್ತಿ ಇವರುಗಳನ್ನು ಸಹ ಸ್ವಾಗತಿಸಲಾಯಿತು.

**ಪ್ರಸ್ತಾವನೆ:** ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳನ್ನು ಮತ್ತೊಮ್ಮೆ ಸ್ವಾಗತಿಸುತ್ತಾ ಪ್ರಾಸ್ತಾವಿಕ ನುಡಿಗಳನ್ನಾಡಿದರು, Infosys ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ (KSHEC) ಸಂಯುಕ್ತ ಆಶ್ರಯದಲ್ಲಿ ಮೈಸೂರಿನಲ್ಲಿ ನಡೆದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿನ ಚರ್ಚೆಯನ್ನು ಉಲ್ಲೇಖಿಸಿದರು. ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಅಭಿವೃದ್ಧಿಗಾಗಿ ಪ್ರತಿಷ್ಠಿತ Infosys ಸಂಸ್ಥೆಯ ಮೂಲಕ ಹತ್ತು ಹಲವು ಹೊಸ ಕೋರ್ಸ್ / ಯೋಜನೆಗಳನ್ನು ರೂಪಿಸುವುದಕ್ಕೆ ಸಂಬಂದಿಸಿದಂತೆ ಒಡಂಬಡಿಕೆ ಮಾಡಿಕೊಳ್ಳಲು ಸರ್ಕಾರವು ಕೈಗೊಂಡ ಕ್ರಮ ನಿಜಕ್ಕೂ ಶ್ಲಾಘನೀಯವೆಂದರು ವಿಶ್ವವಿದ್ಯಾಲಯದ ಆಡಳಿತದಲ್ಲಿ UUCMS ತಂತ್ರಾಂಶ / ಎನ್.ಇ.ಪಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದಕಾಗಿ ವಿಶ್ವವಿದ್ಯಾಲಯವನ್ನು ಪ್ರಶಂಸಿಸಿರುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಕಾರಣರಾದಂತಹ ಕುಲಸಚಿವರು (ಆಡಳಿತ), ಕುಲಸಚಿವರು (ಪರೀಕ್ಷಾಂಗ), ನೋಡಲ್ ಆಫೀಸರ್ – UUCMS ಇವರನ್ನು ಅಭಿನಂದಿಸಿದರು.

ರಾಜ್ಯದ ಜನತೆಯಲ್ಲಿ ಕನ್ನಡ ನಾಡು – ನುಡಿ – ಸಂಸ್ಕೃತಿಗಳನ್ನು ಉಳಿಸಿ ಬೆಳಸುವ ನಿಟ್ಟಿನಲ್ಲಿ ಘನ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರೂಪಿಸಿದ "ಕೋಟಿ ಕಂಠ ಗಾಯನ" ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಇದರಲ್ಲಿ ವಿಶ್ವವಿದ್ಯಾಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳು / ಅಧ್ಯಾಪಕರುಗಳು / ಅಧ್ಯಾಪಕೇತರ ಸಿಬ್ಬಂದಿಗಳು / ಎಲ್ಲಾ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರುಗಳು ಪಾಲ್ಗೊಂಡಿದ್ದನ್ನು ಸಭೆಯ ಗಮನಕ್ಕೆ ತಂದರು. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಕುಲಸಚಿವರನ್ನು ಅಭಿನಂದಿಸಿದರು.

ಮುಂದುವರಿಯುತ್ತಾ, ವಿಶ್ವವಿದ್ಯಾಲಯದಲ್ಲಿ ವಿನೂತನ ಗಮಕ ಅಧ್ಯಯನ ಪೀಠವನ್ನು ಸ್ಥಾಪನೆ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಸಲು ಸರ್ಕಾರದಿಂದ ಸೂಚನೆ ದೊರೆತಿರುವುದು ವಿಶ್ವವಿದ್ಯಾಲಯದ ಕಿರೀಟಕ್ಕೆ ಸಂದ ಮತ್ತೊಂದು ಹೆಮ್ಮೆಯ ಗರಿ ಎಂದರು. ಕೇಂದ್ರ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಶ್ರೀ ಧರ್ಮೇಂದ್ರ ಪ್ರಧಾನ್ ಇವರು ಸಹ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಕೈಗೊಂಡ ಕ್ರಮಗಳನ್ನು ಪ್ರಶಂಸಿಸಿರುವುದಾಗಿ ಮಾನ್ಯ ಕುಲಪತಿಗಳು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳ ನಂತರ ಮಾನ್ಯ ಶ್ರೀ ರಾಮಲಿಂಗಪ್ಪ ಹೆಚ್ ಇವರು ಮಾತನಾಡುತ್ತ, ಈ ಹಿಂದಿನ ಸಿಂಡಿಕೇಟ್ ಸಭೆಗಳ ನಿರ್ಣಯಗಳ ಮೇಲೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮಗಳ ಬಗ್ಗೆ ಚರ್ಚೆ ಪೂರ್ಣಗೊಂಡ ನಂತರವೇ ಸಭೆಯ ಕಾರ್ಯಸೂಚಿಯನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ಶ್ರೀ ಹೆಚ್.ಬಿ ರಮೇಶ ಬಾಬುರವರು ಮಾತನಾಡುತ್ತಾ, ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಕಾಲದಲ್ಲಿ ಎಲ್ಲಾ ಸದಸ್ಯರುಗಳಿಗೆ ತಲುಪಿಸುವಲ್ಲಿ ಸಮರ್ಪಕ ನಿರ್ವಹಣೆ ಆಗುತ್ತಿಲ್ಲವೆಂದು ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ದೂರಿದರು.

ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರು ಮಾತನಾಡುತ್ತಾ, ಪ್ರೊ. ಕೇಶವಶರ್ಮ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳುವ ಬಗ್ಗೆ ಮತ್ತು 371(ಜೆ) ಹೈದರಾಬಾದ್ – ಕರ್ನಾಟಕದ ಸಿಬ್ಬಂದಿಗಳ ಮುಂಬಡ್ತಿ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದರು.

ಕುಲಸಚಿವರು ಮಾತನಾಡುತ್ತಾ, ಆಯಾ ವಿಶ್ವವಿದ್ಯಾಲಯದಲ್ಲಿನ ನಿವೃತ್ತ ಪ್ರಾಧ್ಯಾಪಕರುಗಳನ್ನು ಆಯಾ ವಿಶ್ವವಿದ್ಯಾಲಯದಲ್ಲೇ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕಗೊಳಿಸಲು ಅವಕಾಶವಿಲ್ಲವಾದ್ದರಿಂದ ಹಾಗೂ ಸಂದರ್ಶಕ ಪ್ರಾಧ್ಯಾಪಕರಿಗೆ ಹಿಂದೆ ಯು.ಜಿ.ಸಿ ಪ್ರಾಜೆಕ್ಟ್‌ಗಳಡಿ ಅನುದಾನ ನೀಡಿದ್ದು ಈಗ ಅವಕಾಶವಿಲ್ಲವೆಂದು ಹಣಕಾಸು ಅಧಿಕಾರಿಗಳು ವರದಿ ನೀಡಿರುತ್ತಾರೆ ಎಂದು ಹೇಳಿದರು. ಮತ್ತು 371(ಜೆ) ಅಡಿ ಬರುವ ಸಿಬ್ಬಂದಿಗಳ ಮುಂಬಡ್ತಿಗೆ ಕುಲಪತಿಗಳ ದಿನಾಂಕ ಲಭ್ಯತೆ ಮೇರೆಗೆ ದಿನಾಂಕ ನಿಗದಿಪಡಿಸಲಾಗುವುದು ಎಂದು ಹೇಳಿದರು.

ಆಗ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರು ವಿಳಂಬ ಮಾಡದೆ ಹಿಂಬರಹವನ್ನಾದರು ಬೇಗ ನೀಡಿ ಎಂದರು.

ಶ್ರೀ ಬಳ್ಳೇಕೆರೆ ಸಂತೋಷ್ ಇವರು ಮಾತನಾಡುತ್ತಾ, ಸಹ್ಯಾದ್ರಿ ವಿಜ್ಞಾನ ಕಾಲೇಜಿನ ತಾತ್ಕಾಲಿಕ ಪ್ರಾಂಶುಪಾಲರ ಸಂದರ್ಶನ ಪ್ರಕ್ರಿಯೆ ವಿಷಯದಲ್ಲಿ ಸಕಾಲದಲ್ಲಿ ಕ್ರಮವಹಿಸದೆ ಇದ್ದುದರಿಂದ ನ್ಯಾಯಾಲಯದ ಮೊರೆ ಹೋಗಲು ವಿಶ್ವವಿದ್ಯಾಲಯವೇ ಅವಕಾಶ ಮಾಡಿಕೊಟ್ಟಂತಾಗಿದೆ ಎಂದರು.

ಕುಲಸಚಿವರು ಪ್ರತಿಕ್ರಿಯಿಸುತ್ತಾ, ಸಂದರ್ಶನ ಪ್ರಕ್ರಿಯೆ ನಿಯಮಾನುಸಾರ ಮಾಡಬೇಕಾಗಿರುತ್ತದೆ ಎಂದರು. ಪ್ರಾಂಶುಪಾಲರ ಸಂದರ್ಶನಕ್ಕೆ ಸಂಬಂಧಿಸಿದಂತೆ, ಉಚ್ಚನ್ಯಾಯಾಲಯದ ತಡೆಯಾಜ್ಞೆ ತೆರವು ವಿಚಾರವಾಗಿಯು ಸಹ ಕಾನೂನು ಸಲಹೆಗಾರರೊಂದಿಗೆ ಈಗಾಗಲೇ ಚರ್ಚಿಸಲಾಗಿದ್ದು, ಕಂಡಿಕೆವಾರು ಷರಾ ಪೂರ್ಣಗೊಳಿಸಿದ್ದು ಪ್ರಕ್ರಿಯೆ ಪ್ರಗತಿಯಲ್ಲಿದೆಯೆಂದರು.

ಕುಲಸಚಿವರು ಮಾತನಾಡುತ್ತಾ, ದೂರ ಶಿಕ್ಷಣ ವಿಷಯದ ನಿರ್ಣಯಕ್ಕೆ ಸಂಬಂಧಿಸಿದಂತೆ, ಪರೀಕ್ಷೆಗಳು ನಡೆಯುತ್ತಿರುವುದರಿಂದ ಫಲಿತಾಂಶ ತಡೆಹಿಡಿದು ಅಂಕಪಟ್ಟಿಯನ್ನು ನೀಡುವುದು ಬೇಡವೆಂದು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯ ನಂತರ ನಿರ್ಣಯವಾಗಿದೆ. ನಡಾವಳಿಗಳು ಸಿದ್ದವಾಗಿದ್ದು,

ಪರಿಚಲಿಸಿದ ನಂತರವೇ ಎಲ್ಲಾ ನಿರ್ಣಯಗಳನ್ನು ಕಾರ್ಯಗತಗೊಳಿಸುವ ಪದ್ಧತಿ ಇದೆಯೆಂದು ಸಭೆಗೆ ತಿಳಿಸಿದರು.

ಇನ್ನು ಪ್ರೊ: ಯೋಗೀಶ್ ಎಸ್.ಎನ್. ಇವರ ವಿರುದ್ಧ ಪೋಲೀಸ್ ಪ್ರಕರಣ(FIR) ದಾಖಲಿಸುವ ವಿಚಾರದಲ್ಲಿ ದೂರನ್ನು ಸಿದ್ದಪಡಿಸಲು ಕಾನೂನು ಸಲಹೆಗಾರರಿಗೆ ಅಧಿಕೃತವಾಗಿ ತಿಳಿಸಲಾಗಿದೆ. ಕರಡು ಸಿದ್ದವಾದ ಕೂಡಲೇ ಎಫ್.ಐ.ಆರ್ ದಾಖಲಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದರು.

ಕುಲಸಚಿವರು ಮುಂದುವರೆಸುತ್ತಾ, ದಿನಾಂಕ:28-10-2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾದ ಕಾರ್ಯಸೂಚಿಗಳ (Agenda) ಚರ್ಚೆಗೆ ಅವಕಾಶವೇ ಆಗಿಲ್ಲದ ಹಿನ್ನೆಲೆಯಲ್ಲಿ ದಿನಾಂಕ: 30-07-2022ರ ಸಿಂಡಿಕೇಟ್ ಸಭೆಯ ಕೆಲವು ನಿರ್ಣಯಗಳು ದೃಢೀಕರಣಗೊಂಡಿರುವುದಿಲ್ಲ ಆದ್ದರಿಂದ, ನಡಾವಳಿಗಳಲ್ಲಿ ವ್ಯತ್ಯಾಸವಾಗಿದ್ದಲ್ಲಿ ಈ ಸಭಯಲ್ಲಿ ಚರ್ಚಿಸಿ ಸರಿಪಡಿಸಬಹುದೆಂದರು. ನಂತರ ಕಾರ್ಯಸೂಚಿಯಂತೆ ವಿಷಯವನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರಗಳ ವಿಭಾಗ

**2022-ಸಿಂ-8.01:** ದಿನಾಂಕ:30-07-2022 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ಚರ್ಚೆ:** **ವಿಷಯ ಸಂಖ್ಯೆ:2022-ಸಿಂ.7.14ಕ್ಕೆ** ಸಂಬಂಧಿಸಿದಂತೆ, ಶ್ರೀ ರಾಮಲಿಂಗಪ್ಪ ಹೆಚ್. ಇವರು ಮಾತನಾಡುತ್ತಾ, ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬ್ಬಂದಿಗಳು ಈಗಾಗಲೇ ಶಿಕ್ಷೆ ಅನುಭವಿಸಿಯಾಗಿದೆಯಾದ್ದರಿಂದ ಅಭಿಯೋಜನೆ ಪತ್ರ ನೀಡುವುದು ಬೇಡವೆಂದರು ಸರ್ಕಾರದ ಆಕ್ಷೇಪಣೆ ಬಂದಲ್ಲಿ ಆಗ ಪರಿಶೀಲಿಸುವುದು ಸೂಕ್ತ ಎಂದರು.

ಪ್ರೊ. ರಿಯಾಜ್ ಮಹಮೂದ್, ಇವರು ಉತ್ತರಿಸುತ್ತಾ, ಈ ಬಗ್ಗೆ ಈ ಹಿಂದಿನ ಸಭೆಯಲ್ಲಿ ಸಾಕಷ್ಟು ದೀರ್ಘ ಚರ್ಚೆಯಾಗಿ ನಂತರ, ಸ್ಪಷ್ಟ ಕಾನೂನು ಅಭಿಪ್ರಾಯ ಪಡೆಯಲು ನಿರ್ಧರಿಸಲಾಗಿತ್ತು ಎಂದರು.

ಆಗ ಕುಲಸಚಿವರು ಸ್ಪಷ್ಟ ಕಾನೂನು ಅಭಿಪ್ರಾಯ ಇನ್ನು ಬಂದಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಹಾಗೂ ನ್ಯಾಯಾಲಯವು ನಿಯಮಾನುಸಾರ ತನಿಖೆ ಮಾಡಲು ಸಕ್ಷಮ ಪ್ರಾಧಿಕಾರದ ಅನುಮತಿ ಕೇಳುತ್ತಿದೆ. ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳುವುದು ಸೂಕ್ತವೆಂದು ತಿಳಿಸಿದರು. ಹಾಗೂ ಅಭಿಯೋಜನಾ ಪತ್ರ ನಿಯಮಾನುಸಾರ ನೀಡುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.

ಆಗ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ರಾಮಲಿಂಗಪ್ಪ ಹೆಚ್, ಶ್ರೀ ಬಳ್ಳೇಕೆರೆ ಸಂತೋಷ್ ಶ್ರೀ ಹೆಚ್. ಬಿ. ರಮೇಶಬಾಬು ರವರುಗಳು ಅಭಿಯೋಜನಾ ಪತ್ರ ನೀಡಬಾರದೆಂದು ಮಾನ್ಯ ಕುಲಪತಿಗಳನ್ನು ಆಗ್ರಹಿಸಿದರು ಅದಕ್ಕೆ ಮಾನ್ಯ ಕುಲಪತಿಗಳು ಅನುಮೋದಿಸಿದರು.

ನಿರ್ಣಯ: ನಕಲಿ ಉತ್ತರ ಪತ್ರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಷಯ ಸಂಖ್ಯೆ:2022–ಸಿಂ.7.14 ರ ನಿರ್ಣಯವನ್ನು ಮರುಪರಿಶೀಲಿಸಲಾಯಿತು ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರ ಅಭಿಮತದಂತೆ ಅಭಿಯೋಜನಾ ಸಂಪೂರ್ಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯು ನೀಡಬಾರದೆಂದು ನಿರ್ಣಯಿಸಲಾಯಿತು ಹಾಗೂ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ ಸಂಖ್ಯೆ:2022:ಸಿಂ:7.15(ಎಫ್)ಗೆ ಸಂಬಂಧಿಸಿದಂತೆ**

ಶ್ರೀ ರಾಮಲಿಂಗಪ್ಪ ಹೆಚ್. ಇವರು ಮಾತನಾಡುತ್ತಾ, ಪ್ರೊ:ಎಸ್.ಎನ್.ಯೋಗೇಶ್–ಇವರನ್ನು ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ತಮ್ಮ ಆಕ್ಷೇಪಣೆ ಇದೆ ಎಂದರು.

ಶ್ರೀ ಬಳ್ಳೇಕೆರೆ ಸಂತೋಷ್, ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯವು ಆಪಾದಿತರನ್ನು ರಕ್ಷಿಸುತ್ತಾ ಇದೆ ಎಂದು ಆರೋಪಿಸಿದರು. ಅದೇ ರೀತಿ, ಶ್ರೀ ರಮೇಶ್ ಬಾಬು ಇವರು ಆರೋಪಿ ಪ್ರಾಧ್ಯಾಪಕರ ವಿರುದ್ಧ ಎಫ್.ಐ.ಆರ್. ದಾಖಲಿಸಲು ಕ್ರಮ ಕೈಗೊಳ್ಳದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಪ್ರೊ: ರಿಯಾಜ್ ಮಹಮೂದ್, ಇವರು ಉತ್ತರಿಸುತ್ತಾ, ವಿಭಾಗದಲ್ಲಿ ಖಾಯಂ ಅಧ್ಯಾಪಕರು ಯಾರೂ ಇಲ್ಲದಿರುವುದರಿಂದ ಹಾಗೂ ಅವರು ಇನ್ನೂ ಆರೋಪಿಯಾಗಿರುವುದರಿಂದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಬಹುದು. ಎಫ್.ಐ.ಆರ್. ದಾಖಲಿಸುವ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಿ ನಂತರ ಮುಂದಿನ ಕ್ರಮ ಜರುಗಿಸುವ ಬಗ್ಗೆ ನಿರ್ಣಯಿಸುವುದು ಸೂಕ್ತ ಎಂದರು.

ಕುಲಸಚಿವರು ಉತ್ತರಿಸುತ್ತಾ, ಕಡತವನ್ನು ಪರಿಶೀಲಿಸಿದಾಗ ಅನಾಮಧೇಯ ದೂರು ಎಂದು ಇದ್ದು, ಪ್ರಾಧ್ಯಾಪಕರದ್ದು ಎನ್ನಲಾದ ಧ್ವನಿಯ ಸಿ.ಡಿ.ಮತ್ತು ಪತ್ರವು ಸರ್ಕಾರದಿಂದ ಬಂದಿರುತ್ತದೆ ಎಂದು ತಿಳಿಸುತ್ತಾ, ಪತ್ರದಲ್ಲಿನ ಅಂಶವನ್ನು ಸಭೆಗೆ ವಿವರಿಸಿದರು.

ಶ್ರೀ ಹೆಚ್.ಬಿ ರಮೇಶ ಬಾಬುರವರು ಮಾತನಾಡುತ್ತಾ, ವಿದ್ಯಾರ್ಥಿನಿಯು ಮರ್ಯಾದೆಗೆ ಅಂಜಿ ದೂರನ್ನು ನೇರವಾಗಿ ವಿಶ್ವವಿದ್ಯಾಲಯಕ್ಕೆ ನೀಡದೇ ಇರಬಹುದು. ಆದರೆ, ಸಕಾರದ ಆದೇಶದ ಮೇಲೆ ಎಫ್.ಐ.ಆರ್. ಮಾಡಬಹುದಲ್ಲವೆ – ಎಂದು ಪ್ರಶ್ನಿಸಿದರು.

ಶ್ರೀ ಧರ್ಮಪ್ರಸಾದ್– ಇವರು ಮಾತನಾಡುತ್ತಾ, ಈ ಬಗ್ಗೆ ತನಿಖಾ ಸಮಿತಿಯ ವರದಿಯೂ ಬಂದಿದ್ದು, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಧ್ವನಿ ಸಿ.ಡಿ.ಯನ್ನು ಕಳುಹಿಸಲು ಶಿಫಾರಸ್ಸು ಮಾಡಲಾಗಿದೆ. ಆದರೆ, ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವ ಮೊದಲು ನಿಯಮಾನುಸಾರ ಎಫ್.ಐ.ಆರ್.ದಾಖಲಿಸಬೇಕಾಗುತ್ತದೆ. ಹಾಗೂ ತನಿಖಾ ವರದಿಯನ್ನು ಸರ್ಕಾರದ ಗಮನಕ್ಕೂ ತರಬೇಕಾಗುತ್ತದೆ ಎಂದರು. ಹಾಗಿದ್ದಾಗ್ಯೂ, ಸಕ್ಷಮ ಪ್ರಾಧಿಕಾರ ಸಿಂಡಿಕೇಟ್ ಆಗಿರುವುದರಿಂದ, ಸಿಂಡಿಕೇಟ್ ನಿರ್ಣಯದನುಸಾರ ಎಫ್.ಐ.ಆರ್.ದಾಖಲಿಸಲು ಕ್ರಮ ಕೈಗೊಳ್ಳುವುದು ಸೂಕ್ತವೆಂದರು.

ಶ್ರೀ ಎನ್. ಆರ್. ಮಂಜುನಾಥ್, ಇವರು ಮಾತನಾಡುತ್ತಾ, ಸರ್ಕಾರದಿಂದಲೇ ಪತ್ರ

ಬಂದಿರುವುದರಿಂದ ಸಿಂಡಿಕೇಟ್ ಎಫ್.ಐ.ಆರ್.ದಾಖಲಿಸಲು ಅನುಮತಿ ನೀಡಿದೆ ಎಂದು ಹಾಗೂ ಸದರಿ ನಿರ್ಣಯವನ್ನು ಜಾರಿಗೊಳಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು ಎಂದು ದಾಖಲಿಸಲು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡುತ್ತಾ, ತಪ್ಪಿತಸ್ಥರನ್ನು ರಕ್ಷಿಸುತ್ತಿಲ್ಲವೆಂದರು ಹಾಗೂ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ನಿರ್ಣಯ:** ವಿಳಂಬ ಮಾಡದೇ, ಶ್ರೀ ಎಸ್.ಎನ್.ಯೋಗೀಶ್, ಪ್ರಾಧ್ಯಾಪಕರು, ಇವರ ವಿರುದ್ಧ ಎಫ್.ಐ.ಆರ್. ದಾಖಲಿಸಲು ಎಲ್ಲಾ ತುರ್ತು ಕ್ರಮ ವಹಿಸಲು ನಿರ್ಣಯಿಸಲಾಯಿತು.

**ವಿಷಯ ಸಂಖ್ಯೆ:2022–ಸಿಂ–7.16ರ** ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರು ಮಾತನಾಡುತ್ತಾ ಹಿಂದಿನ ಸಭೆಯಲ್ಲೂ ಚರ್ಚಿಸಿದಂತೆ ಎಫ್.ಪಿ.ಐ ತಂತ್ರಾಂಶವನ್ನು ಉಚಿತವಾಗಿ ಅಳವಡಿಸುವುದಾಗಿ ಈ ಮೊದಲು ತಿಳಿಸಿದ್ದು ಈಗ ಏಕಾಏಕಿ ಆರಂಭಿಕ ವೆಚ್ಚ ರೂ.50–00ಲಕ್ಷ ಭರಿಸಲು ತಿಳಿಸಿರುವುದು ಸೂಕ್ತವಲ್ಲ ಅಲ್ಲದೇ ಈ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಅಳವಡಿಸುತ್ತಿರುವುದರಿಂದ ಮುಂದೆ ಈ ತಂತ್ರಾಂಶ ವಿಫಲವಾದಲ್ಲಿ ಮುಂದಿನ ಕ್ರಮ ಏನೆಂದು ಪ್ರಶ್ನಿಸಿದರು. ಅಧಿಕ ವೆಚ್ಚದಲ್ಲಿ ಸದರಿ ತಂತ್ರಾಂಶ ಅಳವಡಿಕೆಗೆ ತಮ್ಮ ವಿರೋಧವಿದೆ ಎಂಬುದನ್ನು ಸ್ಪಷ್ಟಪಡಿಸಿದರು.

ಮುಂದುವರೆದು, ಈ ತರಹದ ತಂತ್ರಾಂಶ ನೀಡಲು ಕೇವಲ ಒಂದೇ ಸಂಸ್ಥೆ ಮುಂದೆ ಬಂದಿತ್ತೇ ಹಾಗಿದ್ದಲ್ಲಿ ಈ ಬಗ್ಗೆ ಎಷ್ಟು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು ಎಂಬುದರ ವಿವರ ನೀಡಿ ಎಂದರು.

ಕುಲಸಚಿವರು ಉತ್ತರಿಸುತ್ತಾ, ಈ ಬಗ್ಗೆ ಕಡತವನ್ನು ಪರಿಶೀಲಿಸಿ ಮಾಹಿತಿ ನೀಡಲಾಗುವುದು ಎಂದರು.

ಶ್ರೀ ಬಳ್ಳೇಕೆರೆ ಸಂತೋಷ್, ಇವರು ಮಾತನಾಡುತ್ತಾ, ಆರಂಭಿಕ ವೆಚ್ಚ ಹೆಚ್ಚಾಗುತ್ತದೆ ಎಂದಾದರೆ, ರೂ.30ಲಕ್ಷಕ್ಕೆ ನಿಗದಿಪಡಿಸಬಹುದು ಎಂದರು.

ಶ್ರೀಮತಿ ಭಾರತಿ ಇವರು – ಧ್ವನಿಗೂಡಿಸುತ್ತಾ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು.

ಶ್ರೀ ಬಿ ನಿರಂಜನಮೂರ್ತಿ ಇವರು – ಮಾತನಾಡುತ್ತಾ, ಆನ್‌ಲೈನ್ ಮೂಲಕ ಸಭೆಯಲ್ಲಿ ಪಾಲ್ಗೊಂಡು ಈ ತಂತ್ರಾಂಶವನ್ನು ಅಳವಡಿಸಿಕೊಂಡಲ್ಲಿ ನ್ಯಾಕ್‌ನಲ್ಲಿ Alumni Association ಗೆ ವಿಶೇಷ ಅಂಕವಿರುವುದಾಗಿ ತಿಳಿಸಿದರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲಕ್ಕಾಗಿ ಜಾರಿಗೊಳಿಸಲು ತಪ್ಪೇನಿದೆ ಎಂದು ಪ್ರಶ್ನಿಸಿದರು.

ಪ್ರೊ. ರಿಯಾಜ್ ಮಹಮೂದ್ ಇವರು – ತಮ್ಮ ಹಿಂದಿನ ಅಭಿಪ್ರಾಯವನ್ನೇ ಪುನರುಚ್ಚರಿಸುತ್ತಾ ನ್ಯಾಕ್ ಅಂಕಗಳಿಸಲು ಇದು ಒಂದೇ ಮಾನದಂಡವಾಗಿರುವುದಿಲ್ಲ, ವಿಶ್ವವಿದ್ಯಾಲಯದ Institutional Alumni Association ನೋಂದಣಿ ಆಗಿರುವುದಿಲ್ಲ ಇಂತಹ ಸಂದರ್ಭದಲ್ಲಿ ಕಾಲೇಜುಗಳಿಂದ ಇಂತಹದನ್ನು ನಿರೀಕ್ಷಿಸುವುದು ತಪ್ಪು ಎಂದರು. ಅಲ್ಲದೇ ನಮ್ಮಲ್ಲಿ ಕಲಿತು ಹೋದಂತಹ ವಿದ್ಯಾರ್ಥಿಗಳ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು

ಮಾತನಾಡಬೇಕಾಗುತ್ತದೆ. ಎಫ್.ಪಿ.ಐ ಯೋಜನೆಯನ್ನು ಕಡ್ಡಾಯ ಗೊಳಿಸಿದರೆ ವಿದ್ಯಾರ್ಥಿಗಳಿಗೆ ಅರಿವಿಲ್ಲದಂತೆಯೆ ನಾವು ಹೊರೆ ಹೇರಿದಂತಾಗುತ್ತದೆ. ಇದು ಸಮಂಜಸವಲ್ಲ ಎಂದರು. Charity Begins at Home ಎನ್ನುವಂತೆ ಮೊದಲು ನಮ್ಮಲ್ಲಿ Institutional Alumni Association ನೋಂದಣಿ ಮಾಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು. ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ವ–ಇಚ್ಛೆಯ ಆಯ್ಕೆಗೆ ಬಿಡಬೇಕು ಎಂದರು.

ಶ್ರೀ ನಟೇಶ್ ಎಸ್.ಎಂ ಇವರು – ಕಾಲೇಜು / ವಿಶ್ವವಿದ್ಯಾಲಯಗಳಲ್ಲಿ UUCMS ತಂತ್ರಾಂಶವನ್ನು ಈಗಾಗಲೇ ಅಳವಡಿಸಲಾಗಿದ್ದು, ಅದರಲ್ಲಿ Alumni Association ಅಂಶವು ಒಳಗೊಂಡಂತೆ ಎಲ್ಲಾ ಅಂಶಗಳು ಅಡಕಗೊಂಡಿವೆ. ಅಲ್ಲದೇ ಈ ಹೊಸ ತಂತ್ರಾಂಶ ಜಾರಿಗೆ ತಂದರೆ Fee Mapping ಮಾಡಲು ಅವಕಾಶವಿಲ್ಲ ಎಂದು ಅಭಿಪ್ರಾಯ ಪಟ್ಟರು.

ಶ್ರೀ ಎನ್.ಆರ್. ಮಂಜುನಾಥ್ ಇವರು – ಮಾತನಾಡುತ್ತಾ ಸರಿಯಾದ ರೀತಿಯಲ್ಲಿ ಮನವರಿಕೆ ಮಾಡಿಕೊಡಬೇಕು ಈ ಕೆಲಸವನ್ನು ಎಫ್.ಪಿ.ಐ ನಿಂದ ಮಾಡಿಸಿ ಎಂದರು.

ಕುಲಸಚಿವರು ಮಾತನಾಡುತ್ತಾ, ವಿದ್ಯಾರ್ಥಿಗಳಿಗೆ ಶುಲ್ಕ ಹೆಚ್ಚಳ ಮಾಡಿದರೆ ವಿರೋಧ ವ್ಯಕ್ತವಾಗುತ್ತದೆ. ಹೀಗಿರುವಾಗ ಏಕಾಏಕಿ ಈ ಶುಲ್ಕವನ್ನು ಸೇರಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ ಎಂದರು. ಸರ್ಕಾರದ ಪತ್ರ ಸಂಖ್ಯೆ: ಇಡಿ35:ಇಜಿಓವಿ:2020 ದಿನಾಂಕ:04-08-2020ರಲ್ಲಿನ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ , UUCMS ತಂತ್ರಾಂಶದಲ್ಲಿ 09 Module ಇದ್ದು ಅದರಲ್ಲಿ Alumni Association ಅಂಶವು ಒಳಗೊಂಡಿದೆ ಎಂದರು. ಹಾಗೂ ಸರ್ಕಾರದ ಪತ್ರದಲ್ಲಿ UUCMS ತಂತ್ರಾಂಶವು ಸರ್ಕಾರದಿಂದ ಸಂಪೂರ್ಣ ಜಾರಿಯಾಗುವವರೆಗೆ ಸರ್ಕಾರದ ಅಧೀನದಲ್ಲಿ ಬರುವ ಯಾವುದೇ ವಿಶ್ವವಿದ್ಯಾಲಯ / ಕಾಲೇಜುಗಳಲ್ಲಿ ಹೊಸ ತಂತ್ರಾಂಶ ಖರೀದಿ / ಲೈಸೆನ್ಸ್ ನವೀಕರಣ ಕೈಗೊಳ್ಳತಕ್ಕದ್ದಲ್ಲ ಎಂದಿರುವುದನ್ನು ಸ್ಪಷ್ಟಪಡಿಸಿದರು.

ಶ್ರೀ ಬಿ ನಿರಂಜನಮೂರ್ತಿ ಇವರು – ಮಾತನಾಡುತ್ತಾ, ಇದು ತಂತ್ರಾಂಶವಲ್ಲ ಕೇವಲ ಅಪ್ಲಿಕೇಷನ್ ಎಂದರು.

ಮಾನ್ಯ ಕುಲಪತಿಗಳು ಉತ್ತರಿಸುತ್ತಾ, ಈ ತಂತ್ರಾಂಶವನ್ನು ಈಗಾಗಲೇ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ರಾಜೀವ್ ಗಾಂಧಿ ವಿಶ್ವವಿದ್ಯಾಲಯಗಳು ಯಶಸ್ವಿಯಾಗಿ ಅಳವಡಿಸಿಕೊಂಡಿದ್ದು, ಆರಂಭಿಕ ಶುಲ್ಕವನ್ನು ಜಾರಿಗೊಳಿಸಿದೆ. ಸದರಿ ಯೋಜನೆಯು ಚೆನ್ನಾಗಿ ನಡೆಯುತ್ತಿದೆ ಎಂದರಲ್ಲದೇ ಒಂದು ಬಾರಿ ಮಾತ್ರ ಪಾವತಿಮಾಡಬೇಕಾದ ಸದರಿ ತಂತ್ರಾಂಶವನ್ನು ಕಡ್ಡಾಯವಾಗಿ ಜಾರಿಗೆ ತಂದರೆ ವಿದ್ಯಾರ್ಥಿ ಸಮುದಾಯಕ್ಕೆ ಇಪ್ಪತ್ತಕ್ಕು ಹೆಚ್ಚು ರಾಷ್ಟ್ರಗಳೊಂದಿಗೆ ಸಂಪರ್ಕ ಸಾಧಿಸಲು ಅನುವಾಗಲಿದೆ ಆದ್ದರಿಂದ ಇಂತಹ ಸದವಕಾಶವನ್ನು ಕೈಬಿಡುವುದು ಬೇಡ ಅಳವಡಿಸಿಕೊಳ್ಳೋಣ ಎಂದರು.

ಡಾ. ಧನಂಜಯ ಬಿ.ಜಿ ಇವರು ಮಾತನಾಡುತ್ತಾ, ಇಂಜಿನಿಯರಿಂಗ್ / ಮೆಡಿಕಲ್ ವಿದ್ಯಾರ್ಥಿಗಳ ಆರ್ಥಿಕ ಹಿನ್ನೆಲೆ ಬೇರೆಯೇ ಇರುತ್ತದೆ. ಆದ್ದರಿಂದ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ Option ಕೊಟ್ಟು ಯೋಜನೆ ಚೆನ್ನಾಗಿ ನಡೆದರೆ ನಂತರ ಸ್ನಾತಕ ವಿದ್ಯಾರ್ಥಿಗಳಿಗು Option ನೀಡುವುದು ಸೂಕ್ತವೆಂದರು. ಅಲ್ಲದೇ ಈಗಾಗಲೇ ಶುಲ್ಕಗಳು ಹೆಚ್ಚಿರುವುದರಿಂದ ವಿದ್ಯಾರ್ಥಿ ಸಮುದಾಯದಿಂದ ವಿರೋಧ ವ್ಯಕ್ತವಾಗುವ ಸಾಧ್ಯತೆ ಇರುತ್ತದೆ ಎಂದರು.

ಶ್ರೀಮತಿ ಕಿರಣ್ ರವೀಂದ್ರ ದೇಸಾಯಿರವರು ಉತ್ತರಿಸುತ್ತಾ, ವಿಷಯ ಪರಿಣಿತರು ,ಎಂ.ಸಿ.ಎ ವಿಭಾಗದ ಅಧ್ಯಕ್ಷರು ಮತ್ತು ಪ್ರಾಧ್ಯಾಪಕರೊಬ್ಬರಿಂದ ಈ ಕುರಿತಂತೆ ಅಭಿಪ್ರಾಯ ಪಡೆಯಲು ಲಿಖಿತ ಮನವಿಯನ್ನು ಸಭೆಗೆ ಮಂಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಎಫ್.ಪಿ.ಐ. ಸಂಸ್ಥೆ ಇವರನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಪ್ರಾತ್ಯಕ್ಷಿಕೆ / ಸಂಸ್ಥೆಯವರು ನೀಡಲಿರುವ ಸೌಲಭ್ಯ, ರಿಯಾಯಿತಿ,ಸೇವೆ ಕಾಲಮಿತಿ, ಮತ್ತು ಒಂದು ವೇಳೆ ಸದರಿ ಯೋಜನೆ ಕಾರಣಾಂತರಗಳಿಂದ ನಿಂತು ಹೋದಲ್ಲಿ ಯಾವ ಕ್ರಮ ಕೈಗೊಳ್ಳಬೇಕು ಮುಂತಾದ ಅಂಶಗಳ ಬಗ್ಗೆ ಲಿಖಿತ ವಿವರಣೆ ಪಡೆಯುವುದು. ನಂತರ ಸದರಿ ವಿವರಗಳನ್ನು ಬಾಹ್ಯ ವಿಷಯ ಪರಿಣಿತರೊಬ್ಬರು ಹಾಗೂ ವಿಶ್ವವಿದ್ಯಾಲಯದ ಎಂ.ಸಿ.ಎ.ವಿಭಾಗದ ಅಧ್ಯಕ್ಷರು ಮತ್ತು ಪ್ರಾಧ್ಯಾಪಕರಿಂದ ಪರಿಶೀಲಿಸಿ ಸಾಧಕ ಬಾಧಕಗಳನ್ನು ಚರ್ಚಿಸಿ ನಂತರ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**ವಿಷಯ ಸಂಖ್ಯೆ: 7.20 (ಎ) ನ** ವಿಷಯಕ್ಕೆ ಸಂಬಂಧಿಸಿದ್ದಂತೆ ಶ್ರೀ ಎನ್. ಆರ್ ಮಂಜುನಾಥ್ ಇವರು – ಮಾತನಾಡುತ್ತಾ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಕೈಗೊಳ್ಳಲಾದ ಅನುಪಾಲನೆ ಬಗ್ಗೆ ಪ್ರಶ್ನಿಸಿದರು.

ಕುಲಸಚಿವರು (ಮೌಲ್ಯಮಾಪನ) ಇವರು – ಉತ್ತರಿಸುತ್ತಾ, ಉಚ್ಛ ನ್ಯಾಯಾಲಯದ ತೀರ್ಪಿನನ್ವಯ ವಿದ್ಯಾರ್ಥಿಗಳ ಆಂತರಿಕ ಅಂಕ / Home assignment ಅಂಕಗಳ ಆಧಾರದ ಮೇಲೆ ದೂರ ಶಿಕ್ಷಣ ನಿರ್ದೇಶನಾಲಯದ ವಿವಿಧ ಕೋರ್ಸಗಳ ಫಲಿತಾಂಶಗಳನ್ನು ನ್ಯಾಯಯುತ್ತವಾಗಿ ಪ್ರಕಟಿಸಲಾಗಿದೆ ಎಂದರು.

ಶ್ರೀ ಧರ್ಮಪ್ರಸಾದ್ ಇವರು – ಹಿಂದಿನ ಒಂದು ಪ್ರಕರಣವನ್ನು ಉಲ್ಲೇಖಿಸುತ್ತಾ ದೂರ ಶಿಕ್ಷಣ ನಿರ್ದೇಶನಾಲಯದ ಯಾವುದಾದರು ವಿದ್ಯಾರ್ಥಿ ಅಧಿಕೃತವಾಗಿ ಅಧ್ಯಯನ ಕೇಂದ್ರಕ್ಕೆ ನಿಗದಿತ ದಿನಾಂಕದೊಳಗೆ ನಿಗದಿತ ಶುಲ್ಕವನ್ನು ಪಾವತಿಸಿದ್ದು ಅಧ್ಯಯನ ಕೇಂದ್ರದವರು ವಿಶ್ವವಿದ್ಯಾಲಯಕ್ಕೆ ಆ ದಾಖಲೆಗಳನ್ನು ಸಲ್ಲಿಸದೆ ಇದ್ದಂತಹ ಸಂದರ್ಭದಲ್ಲಿ ಅಂತಹ ನೈಜ ಪ್ರಕರಣದ ವಿದ್ಯಾರ್ಥಿಗಳಿಗೂ ಸಹ ಅವರು ಸಲ್ಲಿಸಿದ ಆಂತರಿಕ ಸಾರಲೇಖ / Home assignment ಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಬೇಕೆಂದರು. ಹಾಗೂ ಪ್ರವೇಶಾತಿ ಅನುಮೋದನೆಯಾದ ವಿದ್ಯಾರ್ಥಿಗಳ ಸಂಖ್ಯೆಗೂ ಫಲಿತಾಂಶ ನೀಡಲಾದ ವಿದ್ಯಾರ್ಥಿಗಳ ಸಂಖ್ಯೆಗೂ ತಾಳೆಯಾಗುತ್ತಿದೆಯೇ ಎಂದು ಪರಿಶೀಲಿಸಿ ಕ್ರಮಕೈಗೊಳ್ಳಿ ಎಂದರು.

ಕುಲಸಚಿವರು (ಮೌಲ್ಯಮಾಪನ) ಇವರು – ಉತ್ತರಿಸುತ್ತಾ, ಅಂತಹ ನೈಜ ಪ್ರಕರಣಗಳನ್ನು ಪರಿಗಣಿಸಲಾಗಿದೆ. ಹಾಗೂ ವಿದ್ಯಾರ್ಥಿಗಳ ಸಂಖ್ಯಾ ಮಾಹಿತಿಯು ತಾಳೆಯಾಗಿದೆ ಎಂದರು.

(ಈ ಸಂದರ್ಭದಲ್ಲಿ ಶ್ರೀ ರಮೇಶ್ ಬಾಬು- ಇವರು ತುರ್ತು ಕಾರ್ಯದ ಮೇರೆಗೆ ಅಧ್ಯಕ್ಷರ ಅನುಮತಿ ಪಡೆದು ಸಭೆಯಿಂದ ನಿರ್ಗಮಿಸಿದರು.)

ಪ್ರೊ: ರಿಯಾಜ್ ಮಹಮೂದ್ ಇವರು ಮಾತನಾಡುತ್ತಾ, ದೂರಶಿಕ್ಷಣ ಅಧ್ಯಯನ ಕೇಂದ್ರದವರು ವಿದ್ಯಾರ್ಥಿಗಳ ಪ್ರವೇಶಾನುಮೋದನಾ ಪಟ್ಟಿಯನ್ನು ನಿಗದಿತ ಶುಲ್ಕದೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ, ಹಲವಾರು ಅಧ್ಯಯನ ಕೇಂದ್ರದವರು ವಿದ್ಯಾರ್ಥಿಗಳ ಪ್ರವೇಶಾನುಮೋದನಾ ಪಟ್ಟಿಯನ್ನು ಸಲ್ಲಿಸಿ ಕೆಲವು ವಿದ್ಯಾರ್ಥಿಗಳ ಶುಲ್ಕವನ್ನು ಮಾತ್ರ ವಿಶ್ವವಿದ್ಯಾಲಯಕ್ಕೆ ಪಾವತಿಸಿರುತ್ತಾರೆ. ಆದ್ದರಿಂದ, ಅಂತಹ ಕೇಂದ್ರದ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯಾಗದೇ ಪರೀಕ್ಷಾ ನೋಂದಣಿ ಸಂಖ್ಯೆಗಳು generate ಆಗುವುದಿಲ್ಲ. ಹಾಗಾಗಿ ಅವರಿಗೆ ಪರೀಕ್ಷೆ ನೀಡಲು ಆಗುವುದಿಲ್ಲವೆಂದರು.

ಶ್ರೀ ಎನ್.ಆರ್. ಮಂಜುನಾಥ್- ಇವರು ಮಾತನಾಡುತ್ತಾ, ದೂರಶಿಕ್ಷಣ ಅಧ್ಯಯನ ಕೇಂದ್ರಗಳ ಶುಲ್ಕ ಸಂಗ್ರಹಣಾ ಪ್ರಕ್ರಿಯೆಯಲ್ಲಿ ಮೃದು ಧೋರಣೆ ತಾಳದೇ ಕಟ್ಟು ನಿಟ್ಟಾಗಿ ಶುಲ್ಕ ಸಂಗ್ರಹಣೆ ಆಗಬೇಕು ಎಂದರು.

ಶ್ರೀ ಧರ್ಮಪ್ರಸಾದ್- ಇವರು ಉತ್ತರಿಸುತ್ತಾ, ವಿಶ್ವವಿದ್ಯಾಲಯದ ದೂರ ಶಿಕ್ಷಣದ ಅವ್ಯವಸ್ಥೆಯೇ ಇದಕ್ಕೆ ಕಾರಣವೆಂದರಲ್ಲದೇ, ಈಗಾಗಲೇ ಪ್ರಥಮ ವರ್ಷದ ಕೋರ್ಸ್‌ಗಳ ಫಲಿತಾಂಶ ನೀಡಲಾದ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ (ಅಂದರೆ, ಹಾಜರಾತಿ, ಪ್ರವೇಶಾನುಮೋದನೆ ಮತ್ತು ಶುಲ್ಕ ಪಾವತಿ- ಈ ಎಲ್ಲಾ ಅಂಶಗಳು ಸಮರ್ಪಕವಾಗಿರುವ ವಿದ್ಯಾರ್ಥಿಗಳಿಗೆ) ಮಾತ್ರ ವಿಶ್ವವಿದ್ಯಾಲಯದ ಶೈಕ್ಷಣಿಕ ವೇಳಾಪಟ್ಟಿಯಾನುಸಾರ ಪರೀಕ್ಷೆ ನಡೆಸಬೇಕೆಂದರು. ಹಾಗೂ ಯಾವುದೇ ಕಾರಣಕ್ಕೂ ಪರೀಕ್ಷೆಗಳನ್ನು ಮುಂದೂಡುವುದು ಬೇಡವೆಂದರು. ಶ್ರೀ ಎನ್.ಆರ್. ಮಂಜುನಾಥ್ ಇವರು ತಮ್ಮ ಸಹಮತ ವ್ಯಕ್ತಪಡಿಸಿದರು.

ಪ್ರೊ: ರಿಯಾಜ್ ಮಹಮೂದ್- ಇವರು ಈ ಹಿಂದೆ, ಆಂತರಿಕ ಅಂಕಗಳ ಸಲ್ಲಿಕೆ ಪ್ರಕರಣದ ಬಗ್ಗೆ ಮಾತನಾಡುತ್ತಾ ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು ಮೌಖಿಕವಾಗಿ ತಿಳಿಸಿದ್ದ ಮೇರೆಗೆ ಐ.ಎ. ಪುಸ್ತಕಗಳನ್ನು ವಿಶ್ವವಿದ್ಯಾಲಯದಲ್ಲಿ ಸ್ವೀಕೃತಿ ರಹಿತವಾಗಿ ಸಲ್ಲಿಸಲಾಗಿದೆ ಎಂಬ ಅಂಶವು ಆ ಅಧ್ಯಯನ ಕೇಂದ್ರದ ಬೇಜವಾಬ್ದಾರಿತನವನ್ನು ತೋರಿಸುತ್ತದೆ ಎಂದರು. ಮಾನ್ಯ ಉಚ್ಚನ್ಯಾಯಾಲಯದ ಆದೇಶವು ನಿಯಮಾನುಸಾರ ನಿಗದಿತ ಸಮಯದಲ್ಲಿ ನಿಗದಿತ ಶುಲ್ಕ, ಐ.ಎ. / ಹೋಮ್ ಅಸೈನ್‌ಮೆಂಟ್ ಕೊಟ್ಟಿರುವಂತಹ ದೂರಶಿಕ್ಷಣ ವಿದ್ಯಾರ್ಥಿಗಳು ಮಾತ್ರ ಒಂದು ಬಾರಿಯ ಕ್ರಮವಾಗಿ ಅನ್ವಯವಾಗುತ್ತದೆ. ಉಳಿದ ಯಾವ ವಿದ್ಯಾರ್ಥಿಗಳಿಗೂ ನ್ಯಾಯಾಲಯದ ಆದೇಶ ಅನ್ವಯವಾಗುವುದಿಲ್ಲವೆಂದರು.

ಶ್ರೀ ಧರ್ಮಪ್ರಸಾದ್, ಇವರು ಪ್ರೊ: ರಿಯಾಜ್ ಮಹಮೂದ್ ಇವರ ವಿವರಣೆಗೆ ಸಹಮತ ವ್ಯಕ್ತಪಡಿಸುತ್ತಾ, ಒಂದು ವೇಳೆ ಯಾವುದೇ ವಿದ್ಯಾರ್ಥಿ ಪೂರ್ಣ ಶುಲ್ಕ ಪಾವತಿಸಿದ್ದು, ಅರ್ಜಿ upload ಆಗಿದ್ದು, ಐ.ಎ. ಸಲ್ಲಿಕೆಯಾಗದೇ ಇರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಐ.ಎ. ಸಲ್ಲಿಕೆಗೆ ಸಮಯಾವಕಾಶ ನೀಡಿ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷಗಳ ಪರೀಕ್ಷೆಗಳನ್ನು ಬರೆಯಲು ಅವಕಾಶ ನೀಡುವ ಬಗ್ಗೆ ತಮ್ಮ ಸಹಮತವಿರುವುದಾಗಿ ತಿಳಿಸುತ್ತಾ

ಇದರಿಂದ ಭ್ರಷ್ಟಾಚಾರವನ್ನೂ ತಡೆಗಟ್ಟಿದಂತಾಗುತ್ತದೆ ಎಂದು ಸಲಹೆ ನೀಡಿದರು. ಹಾಗೂ ಈ ಗೊಂದಲ ಸೃಷ್ಟಿಗೆ ಕಾರಣರಾದವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಎಂದರು.

ಶ್ರೀ ಎನ್. ಆರ್. ಮಂಜುನಾಥ್ ಇವರು ಶ್ರೀ ಧರ್ಮಪ್ರಸಾದ್, ಇವರ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸುತ್ತಾ, ನ್ಯಾಯಾಲಯದ ಆದೇಶದನ್ವಯ ಮುಂದಿನ ತರಗತಿಗೆ ಬಡ್ತಿ ನೀಡಬೇಕಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಖರವಾಗಿ ನಿರ್ಧರಿಸಿ ನಂತರ ಪ್ರಕ್ರಿಯೆ ಕೈಗೊಳ್ಳಲು ಸಲಹೆ ನೀಡಿದರು.

ರಿಜಿಸ್ಟ್ರಾರ್(ಮೌಲ್ಯಮಾಪನ)- ಇವರು ತನಿಖಾ ಸಮಿತಿಯ ಶಿಫಾರಸ್ಸುಗಳನ್ನು ಸಭೆಗೆ ವಿವರಿಸಿದರು. ಮೊದಲನೆಯದಾಗಿ, ಅರ್ಜಿ ಸಲ್ಲಿಸಿ, ಯು.ಜಿ.ಸಿ.ಗೆ ಅಪ್ಲೋಡ್ ಆಗಿರುವ, ಪ್ರವೇಶಾನುಮೋದನೆಯಾಗದ ಆದರೆ, ಕ್ರಮಬದ್ಧವಾಗಿರುವ ವಿದ್ಯಾರ್ಥಿಗಳಿಗೆ ಕಾಲಾವಕಾಶ ನೀಡಿ ಪ್ರವೇಶಾನುಮೋದನೆಗೆ ಅವಕಾಶ ನೀಡಲು ಶಿಫಾರಸ್ಸು ಮಾಡುತ್ತದೆ.

ಎರಡನೆಯದಾಗಿ, ಘನ ಉಚ್ಛ ನ್ಯಾಯಾಲಯದ ಆದೇಶದಲ್ಲಿ ಈಗಾಗಲೇ ಕೆಲವು ವಿದ್ಯಾರ್ಥಿಗಳ ಫಲಿತಾಂಶ ಪ್ರಕಟವಾಗಿದ್ದು, ಫಲಿತಾಂಶ ಪ್ರಕಟವಾಗದೇ ಇರುವ ವಿದ್ಯಾರ್ಥಿಗಳಿಗೆ ಫಲಿತಾಂಶ ನೀಡುವ ವಿಷಯದಲ್ಲಿ ಕಾನೂನು ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಬಹುದು ಎಂದು ಸಮಿತಿ ಶಿಫಾರಸ್ಸು ಮಾಡಿರುವುದಾಗಿ ಸಭೆಯ ಗಮನಕ್ಕೆ ತಂದರು.

ಮೂರನೆಯದಾಗಿ, ಗೊಂದಲಕ್ಕೆ ಕಾರಣರಾದವರ ಮೇಲೆ ಶಿಸ್ತು ಕ್ರಮ ಜರುಗಿಸಲು ಉಚ್ಛ ನ್ಯಾಯಾಲಯ ಶಿಫಾರಸ್ಸು ಮಾಡಿರುವುದನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಧರ್ಮಪ್ರಸಾದ್ ಹಾಗೂ ಶ್ರೀ ಎನ್.ಆರ್.ಮಂಜುನಾಥ್- ಇವರುಗಳು ಮಾತನಾಡುತ್ತಾ ಈ ವಿಷಯದಲ್ಲಿ ಕಾನೂನು ಸಲಹೆ ಪಡೆಯುವ ಅಗತ್ಯವಿಲ್ಲವೆಂದರು. ಗೊಂದಲ ಸೃಷ್ಟಿಸಲು ಕಾರಣರಾದ ಅಧಿಕಾರಿ / ಸಿಬ್ಬಂದಿಗಳ ಪಟ್ಟಿಯನ್ನು ಮಾಡಬೇಕೆಂದು ಆಗ್ರಹಿಸಿದರು.

ಕುಲಸಚಿವರು ಉತ್ತರಿಸುತ್ತಾ .ಎಲ್ಲಾ ಪ್ರಕರಣಗಳಲ್ಲಿಯೂ ಸಾಮಾನ್ಯವಾಗಿ ಒಬ್ಬರೇ ವಕೀಲರನ್ನು ನೇಮಿಸುವುದು ಸೂಕ್ತವಲ್ಲವೆಂದರು.

ಶ್ರೀ ಧರ್ಮಪ್ರಸಾದ್- ಇವರು ಮಾತನಾಡುತ್ತಾ, ಈ ಒಂದು ಪ್ರಕರಣದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಹಾಗೂ ನ್ಯಾಯಾಲಯದ ತೀರ್ಪಿನಲ್ಲಿಯೂ ಸಹ ಇದರ ಉಲ್ಲೇಖವಿರುವುದರಿಂದ ಒಬ್ಬರು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯಿಂದ ನಿಗದಿತ ಕಾಲಾವಧಿಯೊಳಗೆ ತನಿಖೆ ನಡೆಸಿ ಯಾರು ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೋ ಅವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಸಲಹೆ ನೀಡಿದರು ಹಾಗೂ ಪ್ರವೇಶಾತಿ, ಮುಂದಿನ ತರಗತಿಗೆ ಮುಂಬಡ್ತಿ, ಪರೀಕ್ಷೆಗಳನ್ನು ಮುಂದೂಡಿರುವುದು, ವಾಟ್ಸ್ಯಾಪ್ ಸಂದೇಶಗಳು, ಪತ್ರಿಕಾ ಹೇಳಿಕೆಗಳು ಈ ಎಲ್ಲಾ ಅಂಶಗಳನ್ನು ಈ ಸಮಿತಿಯ ವ್ಯಾಪ್ತಿಗೆ ಒಳಪಡಿಸಬೇಕೆಂದರು.

ಕುಲಸಚಿವರು ಮಾತನಾಡುತ್ತಾ, ಈಗಾಗಲೇ ರಚಿಸಲಾಗಿದ್ದ ಸಮಿತಿಯ ಪೂರ್ಣ ವರದಿ / ಶಿಫಾರಸ್ಸು ಬರದೇ ತನಿಖಾ ಪ್ರಕ್ರಿಯೆ ಅಪೂರ್ಣವಾಗುತ್ತದೆ ಎಂದರು. ಮಾನ್ಯ ಕುಲಪತಿಗಳು

ಸಹಮತ ವ್ಯಕ್ತಪಡಿಸಿದರು. ಹಾಗೂ ಸರ್ಕಾರದ ಹಂತದಲ್ಲೂ ದ್ವಿಸದಸ್ಯ ಸಮಿತಿ ರಚನೆಯಾಗಿರುತ್ತದೆ ಎಂದು ಹೇಳಿದರು.

ಪ್ರೊ: ರಿಯಾಜ್ ಮಹಮೂದ್ ಹಾಗೂ ಶ್ರೀ ಧರ್ಮಪ್ರಸಾದ್ ಇವರುಗಳು ಈ ಪ್ರಕರಣದ ತನಿಖೆಯಲ್ಲಿ ಬಹಳಷ್ಟು clerical ಮತ್ತು ತಾಂತ್ರಿಕ ಅಂಶಗಳು ಒಳಗೊಂಡಿರುವುದರಿಂದ ಈಗಾಗಲೇ ರಚಿಸಲ್ಪಟ್ಟ ಸಮಿತಿಯಿಂದ ಇವುಗಳನ್ನು ಪರಿಶೀಲಿಸಲು ಸಾಧ್ಯವಿಲ್ಲವೆಂದರು.

ಆಗ ಕುಲಸಚಿವರು, ಮೇಲ್ಕಂಡ ಅಂಶಗಳನ್ನು ಅಭಿಪ್ರಾಯಿಸಿ ವರದಿ ನೀಡಿದಲ್ಲಿ ಈಗಾಗಲೇ ರಚಿಸಿದ ಸಮಿತಿಯಲ್ಲಿರುವ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗುವುದು ಎಂದರು. ಸುಧೀರ್ಘ ಚರ್ಚೆಯ ನಂತರ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

**ನಿರ್ಣಯ: ದೂರ ಶಿಕ್ಷಣ ನಿರ್ದೇಶನಾಲಯದ ಪ್ರವೇಶಾತಿ ಮತ್ತು ಆಂತರಿಕ ಅಂಕಗಳ ಸಲ್ಲಿಕೆ ಪ್ರಕ್ರಿಯೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವಂತೆ ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಇದರ ಕೂಲಂಕುಷ ತನಿಖೆಗಾಗಿ ಕೆಳಕಂಡ ಉನ್ನತಮಟ್ಟದ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.**

| | |
|---|---|
| **1. ನಿವೃತ್ತ ಜಿಲ್ಲಾ ಸತ್ರ ನ್ಯಾಯಾಧೀಶರು** | **– ಅಧ್ಯಕ್ಷರು** |
| **2. ಸಿಂಡಿಕೇಟ್ ಸದಸ್ಯರು** | **– ಸದಸ್ಯರು** |
| **3. ವಿಶ್ವವಿದ್ಯಾಲಯದ ಒಬ್ಬರು ಪ್ರಾಧ್ಯಾಪಕರು** | **– ಸದಸ್ಯರು** |
| **4. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ** | **– ಸದಸ್ಯ ಸಂಚಾಲಕರು** |

**ಹಾಗೂ ಸದರಿ ಸಮಿತಿಯ ವ್ಯಾಪ್ತಿಗೆ ಪ್ರವೇಶಾತಿ / ಆಂತರಿಕ ಅಂಕಗಳ ಸಲ್ಲಿಕೆ ಪ್ರಕ್ರಿಯೆ /ಮುಂದಿನ ತರಗತಿಗೆ ಮುಂಬಡ್ತಿ/ ಪರೀಕ್ಷೆಗಳನ್ನು ಮುಂದೂಡಿರುವುದು / ವಾಟ್ಸಾಪ್ ಸಂದೇಶಗಳು / ಪತ್ರಿಕಾ ಹೇಳಿಕೆಗಳು /ಅಧ್ಯಯನ ಕೇಂದ್ರದವರು ಪದೇ ಪದೇ ನ್ಯಾಯಾಲಯಕ್ಕೆ ಮೊರೆ ಹೋಗುತ್ತಿರುವುದು – ಈ ಎಲ್ಲಾ ಅಂಶಗಳನ್ನೂ ಒಳಪಡಿಸಲು ನಿರ್ಣಯಿಸಲಾಯಿತು.**

ರಿಜಿಸ್ಟ್ರಾರ್(ಮೌಲ್ಯಮಾಪನ) ಇವರು , 16000 ಸಾವಿರ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸಗಳ ವಿದ್ಯಾರ್ಥಿಗಳಲ್ಲಿ ಕೇವಲ 4500 ವಿದ್ಯಾರ್ಥಿಗಳ ಪ್ರವೇಶಾತಿ ಮಾತ್ರ ಅನುಮೋದನೆಗೊಂಡಿರುವುದರಿಂದ ಹಾಗೂ ಬಾಕಿ ಉಳಿದ 11500 ವಿದ್ಯಾರ್ಥಿಗಳ ಅನುಮೋದನೆಯಾಗದಿರುವುದರಿಂದ ಅವರ ಫಲಿತಾಂಶ ತಡೆಹಿಡಿಯಲಾಗಿರುತ್ತದೆ. ಆದ್ದರಿಂದ ತಡೆಹಿಡಿಯಲಾದ ವಿದ್ಯಾರ್ಥಿಗಳ ಫಲಿತಾಂಶ ನಿರ್ಣಯವಾಗದೆ ಮುಂದಿನ ಪರೀಕ್ಷೆಗಳನ್ನು ಮುಂದೂಡಬೇಕೆಂದು ಬಹುತೇಕ ಎಲ್ಲಾ ಅಧ್ಯಯನ ಕೇಂದ್ರದವರು ಕೋರಿರುತ್ತಾರೆ ಎಂದು ಸಭೆಗೆ ವಿವರಿಸಿದರು.

ಶ್ರೀ ಧರ್ಮಪ್ರಸಾದ್ ಇವರು ಮಾತನಾಡುತ್ತಾ, ಈ ವಿಷಯದ ಬಗ್ಗೆ ಜುಲೈ ತಿಂಗಳ ಸಿಂಡಿಕೇಟ್ ಸಭೆಯಲ್ಲಿ ಚರ್ಚೆಯಾಗಿದೆ. ಪ್ರವೇಶಾನುಮೋದನೆಯಾಗಿ, ಕ್ರಮಬದ್ಧವಾಗಿ ಪರೀಕ್ಷಾ

ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳಿಗೆ ನಿಗದಿತ ವೇಳಾಪಟ್ಟಿಯಂತೆ ಪರೀಕ್ಷೆ ನಡೆಸಬೇಕು. ಪರೀಕ್ಷೆ ಮುಂದೂಡಿದಲ್ಲಿ ವಿಶ್ವವಿದ್ಯಾಲಯದ ಮೇಲೆ ನಂಬಿಕೆ ಹೊರಟು ಹೋಗುತ್ತದೆ ಎಂದರಲ್ಲದೇ, ಬಾಕಿ ಉಳಿದ 11500ವಿದ್ಯಾರ್ಥಿಗಳಿಗೆ ವಿಳಂಬ ಶುಲ್ಕ ಪಡೆದು ಒಂದು ತಿಂಗಳ ಕಾಲಾವಕಾಶ ನೀಡಿ ವಿಶೇಷ ಅನುಮತಿ ನೀಡಿ ಪರೀಕ್ಷೆ ನಡೆಸುವುದು ಸೂಕ್ತವೆಂದು ಪುನರುಚ್ಚರಿಸಿದರು.

ನಿರ್ಣಯ:

**ಈ ಒಂದು ಬಾರಿಗೆ ಮಾತ್ರ , ದೂರಶಿಕ್ಷಣ ನಿರ್ದೇಶನಾಲಯದ ಕೋರ್ಸ್‌ಗಳಿಗೆ ಈ ಕೆಳಕಂಡಂತೆ 2 ಹಂತಗಳಲ್ಲಿ ಪರೀಕ್ಷೆ ನಡೆಸಲು ನಿರ್ಣಯಿಸಲಾಯಿತು.**

1. **ಮೊದಲನೇ ಹಂತದಲ್ಲಿ ಯುಜಿಸಿ ನಿಯಮಾನುಸಾರ ಪ್ರವೇಶಾನುಮೋದನೆಯಾದ ಮತ್ತು ಪರೀಕ್ಷಾ ಶುಲ್ಕ ಪಾವತಿಸಿದ ಕ್ರಮಬದ್ಧವಾಗಿರುವ ದೂರಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳಿಗೆ ಮಾತ್ರ ನಿಗದಿತ ವೇಳಾಪಟ್ಟಿಯಂತೆ ಪರೀಕ್ಷೆ ನಡೆಸಲು ನಿರ್ಣಯಿಸಲಾಯಿತು.**
2. **ಎರಡನೇ ಹಂತದಲ್ಲಿ, ಪ್ರವೇಶಾನುಮೋದನೆಯಾಗದ / ಪರೀಕ್ಷಾ ಶುಲ್ಕ ಪಾವತಿಸದ ದೂರಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳಿಗೆ ಒಂದು ತಿಂಗಳ ಕಾಲಾವಕಾಶ ನೀಡಿ ನಿಗದಿತ ಶುಲ್ಕ ಮತ್ತು ವಿಶ್ವವಿದ್ಯಾಲಯ ಗೊತ್ತುಪಡಿಸುವ ವಿಶೇಷ ವಿಳಂಬ ಶುಲ್ಕ ಪಾವತಿಸಿಕೊಂಡು ಯುಜಿಸಿ ನಿಯಮಗಳ ಷರತ್ತಿಗೊಳಪಟ್ಟು ಪರೀಕ್ಷಾ ಪ್ರಕ್ರಿಯೆ ನಡೆಸಲು ನಿರ್ಣಯಿಸಲಾಯಿತು.**
3. **ಈ ವಿಷಯದ ಕುರಿತು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನೂ ಸಹ ಪಡೆಯಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ:7.21(1)ರ ಪ್ರಸ್ತಾವನೆಗೆ ಸಂಬಂಧಿಸಿದಂತೆ**

ಶ್ರೀ ರಾಮಲಿಂಗಪ್ಪ ಹೆಚ್. ಇವರು ಹಿಂದಿನ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:7.21(1)ರ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮಾತನಾಡುತ್ತಾ, ಸಹ್ಯಾದ್ರಿ ಕಲಾ ಕಾಲೇಜಿನ ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಷಯದ ಮೌಲ್ಯಮಾಪನದಲ್ಲಿ ಉದ್ದೇಶಪೂರ್ವಕವಾಗಿ ಕಡಿಮೆ ಅಂಕ ನೀಡಿರುವ ಮೌಲ್ಯಮಾಪಕರಿಗೆ ಕೆ.ಎಸ್.ಇ.ಇ. ಬೋರ್ಡ್, ಮತ್ತು ಪಿ.ಯು.ಬೋರ್ಡ್‌ಗಳಲ್ಲಿರುವಂತೆ ಶಿಕ್ಷೆ ನೀಡುವ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದರು.

ರಿಜಿಸ್ಟ್ರಾರ್ (ಮೌಲ್ಯಮಾಪನ) ಇವರು ಉತ್ತರಿಸುತ್ತಾ, ದೋಷ ಪೂರಿತ ಮೌಲ್ಯಮಾಪನ ಮಾಡಿದ ಮೌಲ್ಯಮಾಪಕರಿಗೆ ಶಿಕ್ಷೆ ನೀಡುವ ಬಗ್ಗೆ ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ನಿಯಮಾವಳಿಗಳಲ್ಲಿ ಉಲ್ಲೇಖವಿಲ್ಲ . ಅದೇ ರೀತಿ ನಮ್ಮ ರಾಜ್ಯದ ಯಾವ ವಿಶ್ವವಿದ್ಯಾಲಯದಲ್ಲಿಯೂ ಇಲ್ಲವೆಂದರು.

ಪ್ರೊ: ರಿಯಾಜ್ ಮಹಮೂದ್ – ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ದ್ವಿ–ಮೌಲ್ಯಮಾಪನ(ಆಂತರಿಕ ಮತ್ತು ಬಾಹ್ಯ) ಪದ್ಧತಿ ಜಾರಿಯಲ್ಲಿರುತ್ತದೆ. ಅಂತಿಮವಾಗಿ 2 ಮೌಲ್ಯಮಾಪನಗಳ ಸರಾಸರಿಯನ್ನು ವಿದ್ಯಾರ್ಥಿ ಪಡೆದ ಅಂಕ ಎಂದು ಪರಿಗಣಿಸಲಾಗುತ್ತದೆ.

ಈ ಎರಡು ಮೌಲ್ಯಮಾಪನ ಅಂಕಗಳ ಅಂತರ ಶೇ.20ಕ್ಕಿಂತ ಹೆಚ್ಚಿದ್ದರೆ ಮೂರನೇ ಮೌಲ್ಯಮಾಪನಕ್ಕೆ ಒಳಪಡುತ್ತದೆ. ಹಾಗೂ ಯಾವೆರಡು ಮೌಲ್ಯಮಾಪನದ ಅಂಕಗಳ ಅಂತರವು ಕಡಿಮೆ ಇರುತ್ತದೋ ಅವೆರಡು ಅಂಕಗಳ ಸರಾಸರಿ ಅಂಕವನ್ನು ಪರಿಗಣಿಸಲಾಗುತ್ತದೆ. ಈ ಅಂಕಕ್ಕೆ ವಿದ್ಯಾರ್ಥಿಯು ತೃಪ್ತಿಯಾಗದಿದ್ದಲ್ಲಿ ಸವಾಲಿನ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಸವಾಲಿನ ಮೌಲ್ಯಮಾಪನದಲ್ಲಿ ಪಡೆದ ಅಂಕವೇ ಅಂತಿಮವಾಗಿರುತ್ತದೆ. ಇದರಿಂದ ವಿದ್ಯಾರ್ಥಿಗೆ ಎಷ್ಟು ಸಾಧ್ಯವೋ ಅಷ್ಟು ಅನ್ಯಾಯವಾಗದಂತೆ ನಿಯಮಗಳನ್ನು ರೂಪಿಸಲಾಗಿದೆ ಎಂದು ವಿವರಿಸಿದರು.

ಮುಂದುವರಿಯುತ್ತಾ, ಪ್ರತಿಯೊಬ್ಬ ಮೌಲ್ಯಮಾಪಕರ ಮೌಲ್ಯಮಾಪನ ಗುಣಮಟ್ಟ ವಿಭಿನ್ನವಾಗಿರುವುದು ಸಹಜ. ಹಾಗಿದ್ದಾಗ ಕಡಿಮೆ ಅಂಕ ನೀಡಿದ ಮೌಲ್ಯಮಾಪನ ತಪ್ಪು ಎಂದು ಹೇಳಲು ಬರುವುದಿಲ್ಲ.

ಶ್ರೀ ಧರ್ಮಪ್ರಸಾದ್– ಇವರು ಪ್ರೊ: ರಿಯಾಜ್ ಮಹಮೂದ್ ಇವರ ವಿವರಣೆಯನ್ನು ಬೆಂಬಲಿಸುತ್ತಾ, ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಾರದೆಂದೇ ದ್ವಿ–ಮೌಲ್ಯಮಾಪನ, 3ನೇ ಮೌಲ್ಯಮಾಪನ, ಮತ್ತು ಸವಾಲಿನ ಮೌಲ್ಯಮಾಪನ ಪ್ರಕ್ರಿಯೆಗಳನ್ನು ಜಾರಿ ಮಾಡಲಾಗಿದ್ದು, ಸಮರ್ಪಕವಾಗಿದೆಯೆಂದರು. ಆದ್ದರಿಂದ ಶಿಕ್ಷೆ ನೀಡುವ ಮೂಲಕ ಅಧ್ಯಾಪಕರುಗಳ ನೈತಿಕ ಸ್ಥೈರ್ಯ ಕುಂದುವಂತೆ ಮಾಡಬಾರದು. ಪ್ರಕರಣ ಈಗಾಗಲೇ ಸುಖಾಂತ್ಯವಾಗಿದೆ ಎಂದರು.

**ನಿರ್ಣಯ: ಸ್ನಾತಕೋತ್ತರ ಮಟ್ಟದಲ್ಲಿರುವ ಮೌಲ್ಯಮಾಪನ ಪದ್ಧತಿಯು ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಒಂದೇ ರೀತಿಯದ್ದಾಗಿರುವುದರಿಂದ, ಇದೇ ಪದ್ಧತಿಯನ್ನು ಸಧ್ಯಕ್ಕೆ ಮುಂದುವರಿಸಲು ಸಭೆಯು ಅನುಮತಿಸಿತು.**

**ವಿಷಯ ಸಂಖ್ಯೆ:7.21(2)ರ ವಿಷಯಕ್ಕೆ ಸಂಬಂಧಿಸಿದಂತೆ**

ಶ್ರೀ ರಾಮಲಿಂಗಪ್ಪ ಹೆಚ್., ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ, ಮತ್ತು ಶ್ರೀ ಎನ್ .ಆರ್. ಮಂಜುನಾಥ್ ಇವರುಗಳು ಪ್ರೊ: ಎಸ್.ಎಸ್.ಪಾಟಿಲ್, ಅವರ ಕೋರಿಕೆ ಮೇರೆಗೆ ಅವರಿಗೆ ಪುಸ್ತಕವೊಂದನ್ನು ಬರೆಯಲು ಸೆಬ್ಯಾಟಿಕಲ್ ರಜೆಯನ್ನು ನಿಯಮಗಳಡಿ ಅವಕಾಶವಿದ್ದಲ್ಲಿ ನೀಡಬೇಕೆಂದು ಆಗ್ರಹಿಸಿದರು.

ಪ್ರೊ: ರಿಯಾಜ್ ಮಹಮೂದ್, ಇವರು ಅಧ್ಯಾಪಕರುಗಳಿಗೆ ಪುಸ್ತಕವನ್ನು ಬರೆದು ಪ್ರಕಟಿಸಲು ಮತ್ತು ಬೇರೆ ಪ್ರತಿಷ್ಠಿತ ಸಂಸ್ಥೆಗಳ ಪ್ರಯೋಗಾಲಯಗಳಲ್ಲಿ ಸಂಶೋಧನೆ ಕೈಗೊಳ್ಳಲು ಸೆಬ್ಯಾಟಿಕಲ್ ರಜೆಗಳನ್ನು ನಿಯಮಾನುಸಾರ ನೀಡಬಹುದಾಗಿರುತ್ತದೆ ಎಂದು ವಿವರಿಸಿದರು. ಹಾಗೂ ಅವರು ವಿಭಾಗಕ್ಕೆ ರೆಗ್ಯುಲರ್ ಆಗಿ ಬಂದಿರುವುದರಿಂದ ಮತ್ತು ಡಾಕ್ಟರಲ್ ಕಮಿಟಿ ಸಭೆಯಲ್ಲಿಯೂ ಸಹ ಪಾಲ್ಗೊಂಡಿರುವುದರಿಂದ ಆರೋಗ್ಯವಾಗಿ ಸಶಕ್ತರೆಂದು ಪರಿಗಣಿಸಿ ಸೆಬ್ಯಾಟಿಕಲ್ ರಜೆ ಮಂಜೂರು ಬಹುದಾಗಿರುತ್ತದೆ ಎಂದರು.

ಶ್ರೀ ಧರ್ಮಪ್ರಸಾದ್ ಇವರು ಮಾತನಾಡುತ್ತಾ ಸೆಬ್ಯಾಟಿಕಲ್ ರಜೆ ನೀಡಲು ಅವಕಾಶವಿದ್ದರೆ ಸೂಕ್ತ ದಾಖಲೆಗಳನ್ನು ಪಡೆದು ಮಂಜೂರು ಮಾಡಬಹುದೆಂದರು.

ನಿರ್ಣಯ: **ಸುಧೀರ್ಘ ಚರ್ಚೆಯ ನಂತರ, ಪ್ರೊ: ಎಸ್.ಎಸ್.ಪಾಟಿಲ್ , ಅವರು ನೀಡುವ ಮತ್ತಷ್ಟು ಪೂರಕ ದಾಖಲಾತಿಗಳನ್ನು ಆಧರಿಸಿ ಸೆಬ್ಯಾಟಿಕಲ್ ರಜೆಯನ್ನು ಮಂಜೂರು ಮಾಡಲು ನಿರ್ಣಯಿಸಿತು.**

ಶ್ರೀ ಧರ್ಮಪ್ರಸಾದ್, ಇವರು ಮಾತನಾಡುತ್ತಾ, ಅತಿಥಿ ಉಪನ್ಯಾಸಕರ ಅವಧಿ ಪೂರ್ಣಗೊಂಡಿದ್ದು ಅವರನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಆದರೆ, ಸದರಿ ಅತಿಥಿ

ಉಪನ್ಯಾಸಕರುಗಳು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಯೋಜನೆಯಡಿ ಶೈಕ್ಷಣಿಕ ಹಿತದೃಷ್ಟಿಯಿಂದ ತರಗತಿಗಳನ್ನು ನಡೆಸುತ್ತಿರುವುದರಿಂದ ಅವರುಗಳ ಮರು ನೇಮಕಾತಿ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದರು.

ಕುಲಸಚಿವರು ಮಾತನಾಡುತ್ತಾ, ಯು.ಜಿ.ಸಿ.ನಿಯಮಗಳ ಪ್ರಕಾರ ಹಾಗೂ ಕೋರ್ಟ್ ಆದೇಶದನ್ವಯವೂ ಸಂದರ್ಶನ ಮಾಡಬೇಕಾಗಿರುವುದಾಗಿ ತಿಳಿಸಿದರು ಹಾಗೂ ವಿಷಯವನ್ನು ಮಾನ್ಯ ಕುಲಪತಿಗಳಿಗೆ ಮಂಡಿಸಲಾಗಿದೆಯೆಂದರು.

**ನಿರ್ಣಯ:** ಉಳಿದಂತೆ, ದಿ:30-07-2022ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳನ್ನು ದೃಢೀಕರಿಸಲಾಯಿತು.

**ವಿಷಯ ಸಂಖ್ಯೆ:8.01(ಎ):** ದಿನಾಂಕ: 28-10-2022ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ: 28-10-2022ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳನ್ನು ದೃಢೀಕರಿಸಲಾಯಿತು.

**2022-ಸಿಂ-8.02:** ಸ್ನಾತಕ ಕನ್ನಡ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಸ್ನಾತಕ ಕನ್ನಡ ಅಧ್ಯಯನ ಮಂಡಳಿಯ ಪುನರ್‌ರಚನೆಯನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022-ಸಿಂ-8.03:** ಸ್ನಾತಕೋತ್ತರ ಮನಃಶಾಸ್ತ್ರ ಪಿ.ಜಿ. ಡಿಪ್ಲೋಮಾ ಇನ್ ಕೌನ್ಸಿಲಿಂಗ್(ಸಂಯುಕ್ತ) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಮನಃಶಾಸ್ತ್ರ ಪಿ.ಜಿ. ಡಿಪ್ಲೋಮಾ ಇನ್ ಕೌನ್ಸಿಲಿಂಗ್(ಸಂಯುಕ್ತ) ಅಧ್ಯಯನ ಮಂಡಳಿಯ ಪುನರ್‌ರಚನೆಯನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022-ಸಿಂ-8.04:** ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ :** ಸ್ನಾತಕೋತ್ತರ ಎಂ.ಬಿ.ಎ. ಅಧ್ಯಯನ ಮಂಡಳಿಯ ಪುನರ್‌ರಚನೆಯನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022-ಸಿಂ-8.05:** ಸ್ನಾತಕ ದೈಹಿಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ :** ಸ್ನಾತಕ ದೈಹಿಕ ಶಿಕ್ಷಣ ಅಧ್ಯಯನ ಮಂಡಳಿಯ ಪುನರ್‌ರಚನೆಯನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022-ಸಿಂ-8.08(ಎ):** *STATUTES GOVERNING THE ESTABLISHMENT OF THE POST-GRADUATE DEPARTMENT IN WILD LIFE MANAGEMENT IN KUVEMPU UNIVERSITY AND CREATION AND INSTITUTION OF TEACHING AND NON-TEACHING POSTS IN THE DEPARTMENT* ಅನುಮೋದನೆ ಕುರಿತು.

**ನಿರ್ಣಯ :** ಸ್ನಾತಕೋತ್ತರ ವೈಲ್ಡ್ ಲೈಫ್ ಮ್ಯಾನೇಜ್‌ಮೆಂಟ್ ವಿಭಾಗದ ಸ್ಥಾಪನೆ ಕುರಿತಾದ ಪರಿನಿಯಮವನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

2022–ಸಿಂ–8.08(ಬಿ): *STATUTES GOVERNING THE ESTABLISHMENT OF POST-GRADUATE DEPARTMENT OF STUDIES AND RESEARCH IN MICROBIOLOGY IN KUVEMPU UNIVERSITY AND THE CREATION AND INSTITUTION OF POSTS IN THE DEPARTMENT ಅನುಮೋದನೆ ಕುರಿತು.*

ನಿರ್ಣಯ : ಸ್ನಾತಕೋತ್ತರ ಮೈಕ್ರೋ ಬಯಾಲಜಿ ವಿಭಾಗದ ಸ್ಥಾಪನೆ ಕುರಿತಾದ ಪರಿನಿಯಮವನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

2022–ಸಿಂ–8.08(ಸಿ): *STATUTES GOVERNING THE ESTABLISHMENT OF POST-GRADUATE DEPARTMENT OF STUDIES AND RESEARCH IN PHYSICAL EDUCATION IN KUVEMPU UNIVERSITY AND THE CREATION AND INSTITUTION OF POSTS IN THE DEPARTMENT ಅನುಮೋದನೆ ಕುರಿತು.*

ನಿರ್ಣಯ : ಸ್ನಾತಕೋತ್ತರ ದೈಹಿಕ ಶಿಕ್ಷಣ ವಿಭಾಗದ ಸ್ಥಾಪನೆ ಕುರಿತಾದ ಪರಿನಿಯಮವನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

2022–ಸಿಂ–8.08(ಡಿ): *STATUTES GOVERNING THE ESTABLISHMENT OF POST-GRADUATE DEPARTMENT OF STUDIES AND RESEARCH IN TOURISM ADMINISTRATION IN KUVEMPU UNIVERSITY AND THE CREATION AND INSTITUTION OF POSTS IN THE DEPARTMENT ಅನುಮೋದನೆ ಕುರಿತು.*

ನಿರ್ಣಯ : ಸ್ನಾತಕೋತ್ತರ ಟೂರಿಸಂ ಅಡ್ಮಿನಿಸ್ಟ್ರೇಷನ್ ವಿಭಾಗದ ಸ್ಥಾಪನೆ ಕುರಿತಾದ ಪರಿನಿಯಮವನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

2022–ಸಿಂ–8.08(ಇ): *STATUTES GOVERNING THE ESTABLISHMENT OF POST-GRADUATE DEPARTMENT OF STUDIES AND RESEARCH IN BUSINESS ADMINISTRATION IN KUVEMPU UNIVERSITY AND THE CREATION AND INSTITUTION OF POSTS IN THE DEPARTMENT ಅನುಮೋದನೆ ಕುರಿತು.*

ನಿರ್ಣಯ : ಸ್ನಾತಕೋತ್ತರ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ವಿಭಾಗದ ಸ್ಥಾಪನೆ ಕುರಿತಾದ ಪರಿನಿಯಮವನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

2022–ಸಿಂ.08(ಎಫ್): *SCHEME GOVERNING THE REGULARIZATION OF SERVICES OF THE DRIVERS WORKING IN KUVEMPU UNIVERSITY ON CONSOLIDATED PAYMENTS ಅನುಮೋದನೆ ಕುರಿತು.*

ನಿರ್ಣಯ : *SCHEME GOVERNING THE REGULARIZATION OF SERVICES OFTHE DRIVERS WORKING IN KUVEMPU UNIVERSITY ON CONSOLIDATED PAYMENTS* ಸ್ಕೀಂಅನ್ನು ಸಭೆಯು ಒಂದು ಬಾರಿಯ ಕ್ರಮವಾಗಿ ಮಾತ್ರ ಅನುಮೋದಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

2022–ಸಿಂ–8.10: ವೈದ್ಯಕೀಯ ಚಿಕಿತ್ಸಾ ಮೊತ್ತ ಪಾವತಿಸುವ ಕುರಿತು.

ನಿರ್ಣಯ : ಡಾ: ಪರಮೇಶ್ವರ ನಾಯ್ಕ್ ಪಿ. ಪ್ರಾಧ್ಯಾಪಕರು ಮತ್ತು ಶ್ರೀ ರಾಜಶೇಖರಪ್ಪ ಎಸ್.ಬಿ.

ಇವರುಗಳ ವೈದ್ಯಕೀಯ ಚಿಕಿತ್ಸಾ ವೆಚ್ಚಗಳನ್ನು ನಿಯಮಾನುಸಾರ ಅನುಮೋದಿಸಲಾಯಿತು.

**2022–ಸಿಂ–8.11:** ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಬೋಧಕರ ಹುದ್ದೆಗಳ ಹಂಚಿಕೆ ಬಗ್ಗೆ ದಿನಾಂಕ: 12–09–2022 ಹಾಗೂ 13–10–2022 ರಂದು ನಡೆದ ಡೀನರುಗಳ ಸಭೆಗಳ ನಡಾವಳಿಗಳನ್ನು ಅನುಮೋದಿಸುವ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ಗೆ ಮಾಹಿತಿ ಕಳುಹಿಸಿರುವ ಕ್ರಮದ ಸ್ಥಿರೀಕರಣ ಕುರಿತು.

ಕುಲಸಚಿವರು ಮಾತನಾಡುತ್ತಾ, ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳನ್ನು ಸರ್ಕಾರವೇ ನಡೆಸುವ ಹಿನ್ನೆಲೆಯಲ್ಲಿ ನಮ್ಮ ವಿಶ್ವವಿದ್ಯಾಲಯದ ಬೋಧಕ ವರ್ಗದ ಹುದ್ದೆಗಳ ಸವಿವರವಾದ ಮಾಹಿತಿಯನ್ನು ತುರ್ತಾಗಿ ಸಲ್ಲಿಸುವಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಕೋರಿರುತ್ತದೆ. ಆದ್ದರಿಂದ ಎಲ್ಲಾ ನಿಕಾಯದ ಡೀನರುಗಳ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಅದರಂತೆ ತುರ್ತು ಕ್ರಮ ವಹಿಸಲಾಗಿದೆ ಎಂದರು. ಮತ್ತು ವಿಷಯವನ್ನು ವಿವರಿಸುವಂತೆ ಪ್ರೊ: ರಿಯಾಜ್ ಮಹಮೂದ್ ಇವರನ್ನು ಕೋರಿದರು.

ಪ್ರೊ: ರಿಯಾಜ್ ಮಹಮೂದ್, ಇವರು ಕುವೆಂಪು ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಮೈಸೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಯಾಗಿರುವ ಬೊಧಕ ಹುದ್ದೆಗಳು ಮತ್ತು 1994–95ರಲ್ಲಿ ಸರ್ಕಾರದಿಂದ ಮಂಜೂರಾಗಿರುವ ಬೋಧಕ ಹುದ್ದೆಗಳನ್ನು ಹೊರತುಪಡಿಸಿದರೆ ಇದುವರೆಗೆ ಹೊಸ ಬೋಧಕ ಹುದ್ದೆಗಳು ಮಂಜೂರಾಗಿಲ್ಲ. ಪ್ರಸ್ತುತ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳನ್ನು ಸರ್ಕಾರವೇ ನಡೆಸುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ – ಇವರು ಬೋಧಕ ವರ್ಗದವರ ಮಾಹಿತಿಯನ್ನು ತುರ್ತಾಗಿ ಕಳುಹಿಸಲು ಕೋರಿರುತ್ತಾರೆ. ವಿಶ್ವವಿದ್ಯಾಲಯದ ಹಲವಾರು ಸ್ನಾತಕೋತ್ತರ ವಿಭಾಗಗಳಲ್ಲಿ ಬಹಳಷ್ಟು ಬೋಧಕ ವರ್ಗದವರು ನಿವೃತ್ತರಾಗಿರುತ್ತಾರೆ. ಕೆಲವು ಅಧ್ಯಾಪಕರುಗಳು ಬೇರೆ ವಿಶ್ವವಿದ್ಯಾಲಯಗಳಿಗೆ ನೇಮಕಗೊಂಡಿರುತ್ತಾರೆ. ಅಲ್ಲದೆ, ದಾವಣಗೆರೆ ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಕೆಲವು ಬೋಧಕ ಹುದ್ದೆಗಳು ದಾವಣಗೆರೆ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯಾಗಿರುತ್ತವೆ. ಹೀಗೆ ವರ್ಗಾವಣೆ ಆದ ಹುದ್ದೆಗಳು ಮೂಲತ: ಯಾವ ವಿಭಾಗಕ್ಕೆ ಮಂಜೂರಾದ ಹುದ್ದೆಗಳು ಎಂಬ ಬಗ್ಗೆ ಸರ್ಕಾರದ ಆದೇಶದಲ್ಲಿ ಮಾಹಿತಿ ಇರುವುದಿಲ್ಲ. ಮತ್ತು 371 J ಅಡಿ ಶೇ.8 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿದ ನಂತರ ಉಳಿದ ಮೂಲ ವೃಂದದಲ್ಲಿ ವಿಭಾಗಾವಾರು ಹುದ್ದೆಗಳ ಹಂಚಿಕೆ ಆಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಗಾಗಿ ವಿಶ್ವವಿದ್ಯಾಲಯದ ಅಗತ್ಯತೆಗನುಗುಣವಾಗಿ ರೀಡಿಪ್ಲಾಯ್ ಮಾಡುವ ಬಗ್ಗೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಎಲ್ಲಾ ನಿಕಾಯದ ಡೀನರುಗಳ ಸಭೆಯನ್ನು ಏರ್ಪಡಿಸಿ ವಿಸ್ತೃತ ಚರ್ಚೆ ನಡೆಸಿ ಸ್ನಾತಕೋತ್ತರ ವಿಭಾಗಗಳ ಎಲ್ಲಾ ವೃಂದಗಳ ಹುದ್ದೆಗಳ ಮೂಲ ವಿಭಾಗ ಗುರುತಿಸುವಿಕೆ ಮತ್ತು ರೀ ಡಿಪ್ಲಾಯ್ ಬಗ್ಗೆ ನಿರ್ಣಯ ಕೈಗೊಂಡಿದ್ದು, ಸದರಿ ನಿರ್ಣಯದಂತೆ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ಗೆ ಬೋಧಕ ಹುದ್ದೆಗಳ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ದಿ:12–09–2022 ಮತ್ತು ದಿ:13–10–2022ರಂದು ನಡೆದ ಡೀನರ ಸಭೆಯ ನಡಾವಳಿಗಳನ್ನು ಅನುಮೋದನೆಗೆ ಹಾಗೂ

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ಗೆ ಬೋಧಕ ಹುದ್ದೆಗಳ ಮಾಹಿತಿ ನೀಡಲಾದ ಕ್ರಮವನ್ನು ಸ್ಥಿರೀಕರಿಸುವ ಬಗ್ಗೆ ವಿಷಯವನ್ನು ಮಂಡಿಸಲಾಗಿದೆ ಎಂದು ವಿವರಿಸಿದರು.

**ನಿರ್ಣಯ :** ಚರ್ಚೆಯ ನಂತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಬೋಧಕರ ಹುದ್ದೆಗಳ ಹಂಚಿಕೆ ಬಗ್ಗೆ ದಿನಾಂಕ: 12-09-2022 ಹಾಗೂ 13-10-2022 ರಂದು ನಡೆದ ಡೀನರುಗಳ ಸಭೆಗಳ ನಡಾವಳಿಗಳನ್ನು ಅನುಮೋದಿಸಲಾಯಿತು ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ಗೆ ಮಾಹಿತಿ ಕಳುಹಿಸಿರುವ ಕ್ರಮವನ್ನು ಸ್ಥಿರೀಕರಿಸಿತು.ಹಾಗೂ Redeployment ಪ್ರಕ್ರಿಯೆಗೆ ಸರ್ಕಾರದ ಅನುಮೋದನೆಗೆ ಕಳುಹಿಸಲು ತೀರ್ಮಾನಿಸಲಾಯಿತು.

**2022-ಸಿಂ-8.12:** ಶಾಲಾ ಪರಿಕಲ್ಪನೆಯ School of Social Scienceಗೆ ನಿರ್ದೇಶಕರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ :** ಶಾಲಾ ಪರಿಕಲ್ಪನೆಯ School of Social Scienceಗೆ ಪ್ರೊ: ಸರ್ವಮಂಗಳ ಜಿ. ಪ್ರಾಧ್ಯಾಪಕರು –ಇವರನ್ನು ನಿರ್ದೇಶಕರನ್ನಾಗಿ ನೇಮಿಸಿರುವುದನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು

**2022-ಸಿಂ-8.13:** ಡಾ.ಡಿ.ಎಸ್. ಪೂರ್ಣಾನಂದ, ಪ್ರಾಧ್ಯಾಪಕರು ಇವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವಾವಧಿಯ ಗಳಿಕೆ ರಜೆಯನ್ನು ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣಕ್ಕೆ ಪರಿಗಣಿಸುವ ಬಗ್ಗೆ

**ನಿರ್ಣಯ:** ಡಾ.ಡಿ.ಎಸ್. ಪೂರ್ಣಾನಂದ, ಪ್ರಾಧ್ಯಾಪಕರು ಇವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿದ ಸೇವಾವಧಿಯ ಗಳಿಕೆ ರಜೆಯನ್ನು ನಿವೃತ್ತಿ ನಂತರದ ಗಳಿಕೆ ರಜೆ ನಗದೀಕರಣಕ್ಕೆ ನಿಯಮಾನುಸಾರ ಪರಿಗಣಿಸಲು ಸಭೆಯು ಅನುಮೋದಿಸಿತು.

**2022-ಸಿಂ-8.14:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ :** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022-ಸಿಂ-.14(ಎ):** ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಅನುಮತಿ ಮತ್ತು ನಿರಾಕ್ಷೇಪಣಾ ಪತ್ರ ನೀಡುವ ಕುರಿತು.

**ನಿರ್ಣಯ :** ಸುಧೀರ್ಘ ಚರ್ಚೆಯ ನಂತರ, ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಕೋರಿರುವ ಎಲ್ಲಾ ಸಿಬ್ಬಂದಿಗಳು ಸರ್ಕಾರದ ವಿಶೇಷ ಮೀಸಲಾತಿ 371(ಜೆ) ಅಡಿ ನೇಮಕಗೊಂಡಿರುವುದರಿಂದ ಸದ್ಯಕ್ಕೆ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆಗೆ ಅನುಮತಿ ನೀಡುವುದು ಬೇಡ ಎಂದು ನಿರ್ಣಯಿಸಲಾಯಿತು.

**2022-ಸಿಂ-8.14(ಬಿ):** ಶ್ರೀಬಿ.ಎಸ್.ರುದ್ರೇಶಪ್ಪ, ಪ್ರಥಮ ದರ್ಜೆ ಸಹಾಯಕರು ಇವರಿಗೆ ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮೇಲೆ ತೆರಳಲು ಸದರಿಯವರ ಮನವಿ ಮೇರೆಗೆ ಅನುಮತಿಸುವ ಬಗ್ಗೆ.

**ನಿರ್ಣಯ :** ಚರ್ಚೆಯ ನಂತರ, ಶ್ರೀ ಬಿ.ಎಸ್.ರುದ್ರೇಶಪ್ಪ, ಪ್ರಥಮ ದರ್ಜೆ ಸಹಾಯಕರು ಇವರಿಗೆ ತುಮಕೂರು ವಿಶ್ವವಿದ್ಯಾಲಯಕ್ಕೆ ಎರಡು ವರ್ಷಗಳ ಅವಧಿಗೆ ಮಾತ್ರ ನಿಯೋಜನೆ ಮೇಲೆ ತೆರಳಲು ಅನುಮತಿಸಲಾಯಿತು.

**2022–ಸಿಂ–8.14(ಸಿ):** ದಿವಂಗತ ಪಾಲಾಕ್ಷಪ್ಪ ಎಂ.ಆರ್– ಇವರ ಕುಟುಂಬಕ್ಕೆ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡುವ ಕುರಿತು.

**ನಿರ್ಣಯ :** ಚರ್ಚೆಯ ನಂತರ ದಿವಂಗತ ಪಾಲಾಕ್ಷಪ್ಪ ಎಂ.ಆರ್– ಇವರ ಮಗ ಶ್ರೀ ವಿಕ್ರಮ್.ಪಿ ಇವರಿಗೆ ನಿಯಮಾನುಸಾರ ಜವಾನ ಮತ್ತು ಕಾವಲುಗಾರ ಹುದ್ದೆಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡಲು ಅನುಮತಿಸಲಾಯಿತು.

**2022–ಸಿಂ–8.14(ಡಿ):** ಪ್ರೊ. ಬಿ.ವಿ. ರಾಮಪ್ರಸಾದ್, ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ವಿಭಾಗ– ಇವರಿಗೆ ಸಬ್ಬಾಟಿಕಲ್ ರಜೆ ಮಂಜೂರಾತಿ ಬಗ್ಗೆ.

**ನಿರ್ಣಯ :** ಮುಂದಿನ ಸಭೆಯಲ್ಲಿ ಮಂಡಿಸಲು ಮುಂದೂಡಲಾಯಿತು.

## ಅಭಿವೃದ್ಧಿ ವಿಭಾಗ

**2022–ಸಿಂ–.14(ಇ):** ಡಾ.ರಾಜನಾಯ್ಕ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ–ಇವರ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಸಂಬಂಧ ಅನುಮೋದನೆ ನೀಡುವ ಕುರಿತು.

**ನಿರ್ಣಯ :** **ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ನಿಯಮಾನುಸಾರ ಪ್ರಯಾಣ ಭತ್ಯೆ /ದಿನಭತ್ಯೆಗಳ ವಾಸ್ತವಿಕ ಒಟ್ಟು ವೆಚ್ಚಗಳಲ್ಲಿ 50% ರಷ್ಟು ಹಾಗೂ ನೋಂದಣಿ ಶುಲ್ಕದಲ್ಲಿ 50% ರಷ್ಟು ಅಥವಾ 200$(ಡಾಲರ್) ಇವುಗಳಲ್ಲಿ ಯಾವುದು ಕಡಿಮೆ ಇದೆಯೋ ಅದನ್ನು ವಿ.ವಿ. / ಯು.ಜಿ.ಸಿ. ಅನುದಾನದ ಶೀರ್ಷಿಕೆಯಡಿ ಭರಿಸಲು ಹಾಗೂ ಉಳಿದ ವೆಚ್ಚವನ್ನು ಸಂಬಂಧಿಸಿದ ಪ್ರಾಯೋಜಕ ಸಂಸ್ಥೆಗಳಿಂದಲೇ ಅಧ್ಯಾಪಕರು ಸ್ವಯಂ ಭರಿಸಿಕೊಳ್ಳುವ ಷರತ್ತಿಗೊಳಪಟ್ಟು ಆರ್ಥಿಕ ಮಂಜೂರಾತಿ ನೀಡಲು ನಿರ್ಣಯಿಸಿತು.**

## ದೂರ ಶಿಕ್ಷಣ ನಿರ್ದೇಶನಾಲಯ

**2022–ಸಿಂ–8.15:** ಮೇಲ್ವಿಚಾರಣಾ ಸಮಿತಿ ಸಭಾ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

**ನಿರ್ಣಯ :** ಚರ್ಚೆಯ ನಂತರ ದಿನಾಂಕ: 25–08–2022ರಂದು ನಡೆದ ದೂರ ಶಿಕ್ಷಣ ನಿರ್ದೇಶನಾಲಯ ಮೇಲ್ವಿಚಾರಣಾ ಸಮಿತಿ ಸಭಾ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.

**2022–ಸಿಂ–8.16:** ಕಲಿಕಾರ್ಥಿ ಸೇವಾ ಕೇಂದ್ರಗಳ ಘೋಷಣೆಯ ಕುರಿತು ಅಧಿಸೂಚನೆ ಅನುಮೋದಿಸುವ ಕುರಿತು ಸ್ಥಾಪಿಸುವ ಕುರಿತು.

ನಿರ್ಣಯ : **ಚರ್ಚೆಯ ನಂತರ** ಕಲಿಕಾರ್ಥಿ ಸೇವಾ ಕೇಂದ್ರಗಳ ಘೋಷಣೆಯ ಕುರಿತಾದ ಅಧಿಸೂಚನೆಯನ್ನು ಅನುಮೋದಿಸಿ ಸ್ಥಿರೀಕರಿಸಲಾಯಿತು.

**2022–ಸಿಂ–8.17:** ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸುವ ಕುರಿತು.

ನಿರ್ಣಯ: **ಚರ್ಚೆಯ ನಂತರ** ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ತುರ್ತಾಗಿ ಅಗತ್ಯವಿದ್ದ ಅಧ್ಯಯನ ಸಾಮಗ್ರಿಗಳನ್ನು ಹಳೆಯ ಟೆಂಡರ್ ದರದಲ್ಲಿ ಹಳೆಯ ಟೆಂಡರ್‌ದಾರರಿಂದಲೇ ಮುದ್ರಿಸಿ ಸರಬರಾಜು ಮಾಡಲು ಆದೇಶ ನೀಡಿರುವ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಲಾಯಿತು. ಹಾಗೂ ಮುಂದಿನ ಟೆಂಡರ್ ಪ್ರಕ್ರಿಯೆ ಶೀಘ್ರ ಆರಂಭಿಸಲು ನಿರ್ಣಯಿಸಲಾಯಿತು.

**2022–ಸಿಂ–8.19(ಎ):** 2019–20ನೇ ಸಾಲಿನ ದೂರ ಶಿಕ್ಷಣ ನಿರ್ದೇಶನಾಲಯದ ವಿವಿಧ ಅಧ್ಯಯನ ಕೇಂದ್ರಗಳ ಪ್ರವೇಶಾತಿ ಪರಿಶೀಲನೆ ಮತ್ತು ಆಂತರಿಕ ಅಂಕಗಳ ಸಲ್ಲಿಕೆಯ ಪರಿಶೀಲನಾ ಸಮಿತಿ ಸಭೆಯ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ನಿರ್ಣಯ : **ಈ ವಿಷಯದ ಬಗ್ಗೆ ದಿ: 30–07–2022ರ ಸಿಂಡಿಕೇಟ್ ಸಭೆಯ ನಡಾವಳಿಗಳ ವಿಷಯ ಸಂಖ್ಯೆ: 7.20 (ಎ)ನ** ವಿಷಯಕ್ಕೆ ಸಂಬಂಧಿಸಿದ **ದೃಢೀಕರಣದಲ್ಲಿ ವಿಸ್ತೃತ ಚರ್ಚೆಯಾಗಿದ್ದು, ನಿರ್ಣಯವು ದಾಖಲಾಗಿರುತ್ತದೆ.**

## ಶೈಕ್ಷಣಿಕ ವಿಭಾಗ

**2022–ಸಿಂ–8.20:** "ದಿವಂಗತ ಡಾ.ಅಕ್ಷತಾ ಯಾದವ್ ಡಿ.ಎಸ್.,ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿನಿ ಕುವೆಂಪು ವಿಶ್ವವಿದ್ಯಾಲಯ ,ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ : **ಚರ್ಚೆಯ ನಂತರ** "ದಿವಂಗತ ಡಾ.ಅಕ್ಷತಾ ಯಾದವ್ ಡಿ.ಎಸ್.,ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿನಿ ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ನಿಯಮಾನುಸಾರ ಸ್ಥಾಪಿಸಲು ಅನುಮತಿಸಲಾಯಿತು.

**2022–ಸಿಂ–8.21:** "ಪ್ರೊ. ಕೆ.ವಸಂತಕುಮಾರ್ ಪೈ, ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ನಿರ್ಣಯ: **ಚರ್ಚೆಯ ನಂತರ** "ಪ್ರೊ. ಕೆ.ವಸಂತಕುಮಾರ್ ಪೈ, ನಿವೃತ್ತ ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕವನ್ನು ನಿಯಮಾನುಸಾರ ಸ್ಥಾಪಿಸಲು ಅನುಮತಿಸಲಾಯಿತು.

**2022–ಸಿಂ–8.22:** ವಿದ್ಯಾರ್ಥಿ ಅಪಘಾತ ಜೀವ ವಿಮಾ ಯೋಜನೆ ಪಾವತಿ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ವಿದ್ಯಾರ್ಥಿ ಅಪಘಾತ ಜೀವ ವಿಮಾ ಯೋಜನೆಯ ಪ್ರಸ್ತಾವನೆಯನ್ನು ಸಭೆಯು ಅನುಮೋದಿಸಿತು.

2022–ಸಿಂ–8.22(ಎ): ವಿದ್ಯಾರ್ಥಿಗಳಿಗೆ ಅಪಘಾತ ಜೀವ ವಿಮಾ ರಕ್ಷಣಾ ಯೋಜನೆಯ ಟೆಂಡರ್ ಪ್ರಕ್ರಿಯೆಗಳನ್ನು ನಡೆಸಿರುವ ಕುರಿತು.

ನಿರ್ಣಯ : ಚರ್ಚೆಯ ನಂತರ ವಿದ್ಯಾರ್ಥಿಗಳಿಗೆ ಅಪಘಾತ ಜೀವ ವಿಮಾ ರಕ್ಷಣಾ ಯೋಜನೆಯ ಇ-ಟೆಂಡರ್ ಪ್ರಕ್ರಿಯೆಯನ್ನು / ನಡಾವಳಿಗಳನ್ನು ಸಭೆಯು ಅನುಮೋದಿಸಿತು ಹಾಗೂ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಅನುಮೋದಿಸಿತು.

## ದಾಸ್ತಾನು ಖರೀದಿ ವಿಭಾಗ

2022–ಸಿಂ–8.23: ಕುವೆಂಪು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸುವ ಕುರಿತು.

ನಿರ್ಣಯ : ಕುವೆಂಪು ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಹಾಗೂ ದರ ಸಂಧಾನ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

2022–ಸಿಂ–8.23(ಎ): ಪರೀಕ್ಷಾ ವಿಭಾಗಕ್ಕೆ ಕಂಪ್ಯೂಟರ್, ಪ್ರಿಂಟರ್ ಹಾಗೂ ಇತರೆ ಪರಿಕರಗಳನ್ನು ಖರೀದಿಸುವ ಕುರಿತ ಇ-ಟೆಂಡರ್ ಅಂಗೀಕರಿಸುವ ಕುರಿತು.

ಚರ್ಚೆ: ಕುಲಸಚಿವರು (ಮೌಲ್ಯಮಾಪನ) – ಇವರು ಮಾತನಾಡುತ್ತಾ, ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಹಾಗೂ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಕಂಪ್ಯೂಟರ್, ಪ್ರಿಂಟರ್ ಹಾಗೂ ಇತರೆ ಪರಿಕರಗಳನ್ನು ಖರೀದಿಸುವ ಅವಶ್ಯಕತೆ ಇರುವುದು ಎಂದು ತಿಳಿಸಿದರು. ಈ ಕುರಿತು ಸರ್ಕಾರದ ಯು.ಯು.ಸಿ.ಎಂ.ಎಸ್ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದ್ದಾಗಿರುತದೆ. ಆದ್ದರಿಂದ, ನಿಯಮಾನುಸಾರವೇ ಖರೀದಿಸಲು ಅನುಮತಿಸಬಹುದಾಗಿದೆ ಎಂದರು.

ಕುಲಸಚಿವರು (ಆಡಳಿತ) – ಇವರು ಮಾತನಾಡುತ್ತಾ, ಯು.ಯು.ಸಿ.ಎಂ.ಎಸ್ ಯೋಜನೆ ಯಡಿಯಲ್ಲಿ ಪ್ರವೇಶಾತಿ, ಪರೀಕ್ಷೆ, ಮೌಲ್ಯಮಾಪನ ಮುಂತಾದ 'ಮಾಡ್ಯೂಲ್'('Module')ಗಳು ಇರುವುದರಿಂದ ಅದನ್ನು ಅನುಷ್ಠಾನಕ್ಕೆ ತರಲು ನಿಯಮಾನುಸಾರ ಉಪಕರಣಗಳನ್ನು ಖರೀದಿಸಲು ಅನುಮೋದಿಸಬಹುದಾಗಿದೆ ಎಂದು ಹೇಳಿದರು.

ನಿರ್ಣಯ : ಚರ್ಚೆಯ ನಂತರ, ಪರೀಕ್ಷಾ ವಿಭಾಗಕ್ಕೆ ಕಂಪ್ಯೂಟರ್, ಪ್ರಿಂಟರ್ ಹಾಗೂ ಇತರೆ ಪರಿಕರಗಳನ್ನು ಖರೀದಿಸುವ ಕುರಿತ ಇ – ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

## ಹಣಕಾಸು ವಿಭಾಗ

2022–ಸಿಂ–8.24: 2022–23ನೇ ಆರ್ಥಿಕ ವರ್ಷದ ಪ್ರಥಮ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು

ನಿರ್ಣಯ : 2022–23ನೇ ಆರ್ಥಿಕ ವರ್ಷದ ಪ್ರಥಮ ಹಾಗೂ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

## ಪರೀಕ್ಷಾ ವಿಭಾಗ

**2022–ಸಿಂ–8.26:** ದಿನಾಂಕ:20–08–2022ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

**ನಿರ್ಣಯ :** ದಿನಾಂಕ:20–08–2022ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಿ ಸ್ಥಿರೀಕರಿಸಲಾಯಿತು. ಹಾಗೂ ಪ್ರಕರಣಗಳ ಮುಕ್ತಾಯವಾಗಿದ್ದಲ್ಲಿ ವಿದ್ಯಾರ್ಥಿಗಳಿಂದ ವಶಪಡಿಸಿಕೊಂಡ ಸ್ಮಾರ್ಟ್ ವಾಚ್ ಮತ್ತು ಮೊಬೈಲ್‌ಗಳನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲು ನಿರ್ಣಯಿಸಲಾಯಿತು.

**2022–ಸಿಂ–8.27:** ದಿನಾಂಕ:18–08–2022 ಹಾಗೂ 19–08–2022ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ ಕುರಿತು.

**ನಿರ್ಣಯ :** ದಿನಾಂಕ:18–08–2022 ಹಾಗೂ 19–08–2022ರಂದು ನಡೆದ ವಿವಿಧ ನಿಕಾಯಗಳ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳನ್ನು ಅನುಮೋದಿಸಿ ಸ್ಥಿರೀಕರಿಸಲಾಯಿತು.

**2022–ಸಿಂ–8.28:** ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ಖರೀದಿಗೆ ಸಂಬಂಧಪಟ್ಟ ಟೆಂಡರ್‌ನ ಅನುಮೋದನೆ ಕುರಿತು.

**ನಿರ್ಣಯ :** ಪರೀಕ್ಷಾ ವಿಭಾಗದ ಉತ್ತರ ಪತ್ರಿಕೆ ತುರ್ತು ಖರೀದಿಗೆ ಸಂಬಂಧಪಟ್ಟ ಟೆಂಡರ್‌ನ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು ಹಾಗೂ ಒಂದು ವರ್ಷದ ಅವಧಿಗೆ ಮೆ: ಡಾಟಾಕಾನ್ ಟೆಕ್ನಾಲಜೀಸ್ ಇಂಡಿಯಾ ಲಿಮಿಟೆಡ್, ಬೆಂಗಳೂರು ಇವರೊಂದಿಗೆ ಕರಾರು ಒಪಂದ ಮಾಡಿಕೊಂಡಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2022–ಸಿಂ–8.29:** ಇ–ಟೆಂಡರ್ ಮೂಲಕ ಪಡೆಯಲಾದ ಬಾಡಿಗೆ ವಾಹನಗಳ ಕರಾರು ಅವಧಿಯನ್ನು ಮುಂದುವರೆಸುವ ಕುರಿತು.

**ನಿರ್ಣಯ :** ಬಾಡಿಗೆ ವಾಹನಗಳ ಇ–ಟೆಂಡರ್ ಅಧಿಸೂಚನೆಗೆ ಎರಡು ಬಾರಿಯೂ ಯಾವೊಂದು ಸಂಸ್ಥೆಯೂ ಅರ್ಜಿ ಸಲ್ಲಿಸದೇ ಇದ್ದುದರಿಂದ ಹಾಗೂ ಪರೀಕ್ಷಾ ಸಂಬಂಧಿ ಕಾರ್ಯಗಳಿಗೆ ತುರ್ತಾಗಿ ವಾಹನಗಳನ್ನು ಒದಗಿಸುವ ಅವಶ್ಯಕತೆ ಇದ್ದುದರಿಂದ, ಈ ಹಿಂದೆ ಇ–ಟೆಂಡರ್ ಮೂಲಕ ಪಡೆಯಲಾದ ಸಂಸ್ಥೆಯ ಬಾಡಿಗೆ ವಾಹನಗಳ ಕರಾರನ್ನೇ ಹಿಂದಿನ ದರದಲ್ಲಿ ಮುಂದುವರೆಸುವ ಪ್ರಸ್ತಾವನೆಯನ್ನು ಸಭೆಯು ವಿಶೇಷ ಸಂದರ್ಭವೆಂದು ಪರಿಗಣಿಸಿ ಅನುಮೋದಿಸಿತು.

**2022–ಸಿಂ–8.29(ಎ):** ಅವಧಿ ಪೂರ್ಣಗೊಳಿಸಿದ 2003ರ ನಂತರದ (Double the Duration) ಡಿಪ್ಲೋಮಾ/ಸ್ನಾತಕ/ಸ್ನಾತಕೋತ್ತರ ಮತ್ತು ದೂರ ಶಿಕ್ಷಣ ಪದವಿ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷೆಗೆ ಅವಕಾಶ ನೀಡುವ ಬಗ್ಗೆ.

**ನಿರ್ಣಯ:** ಅವಧಿ ಪೂರ್ಣಗೊಳಿಸಿದ (Double the Duration) ಡಿಪ್ಲೋಮಾ/ಸ್ನಾತಕ/ಸ್ನಾತಕೋತ್ತರ ಮತ್ತು ದೂರ ಶಿಕ್ಷಣ ಪದವಿಯ 2003ರ ನಂತರದ ಅಭ್ಯರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ರೂ.3000/–ಹೆಚ್ಚುವರಿ ಶುಲ್ಕ ಪಾವತಿಸಿಕೊಂಡು ಪರೀಕ್ಷೆಗೆ ಅವಕಾಶ ನೀಡಲು ಸಭೆಯು ಅನುಮತಿಸಿತು.

**2022–ಸಿಂ–8.29(ಬಿ):** ಡಿಜಿಟಲ್ ಮೌಲ್ಯಮಾಪನ ಅಳವಡಿಸಿಕೊಳ್ಳುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ಸಭೆಯು ಸರ್ವಾನುಮತದಿಂದ ಪ್ರಸ್ತಾವನೆಯನ್ನು ಅಂಗೀಕರಿಸಿತು.

**2022-ಸಿಂ-8.29(ಸಿ):** ಆನ್‌ಲೈನ್ ಕೋರ್ಸ್‌ಗಳಿಗೆ e-learning & Examination Portal ತಂತ್ರಾಂಶಗಳನ್ನು ಖರೀದಿಸುವ ಕುರಿತು.

ಕುಲಸಚಿವರು(ಆಡಳಿತ) ಮಾತನಾಡುತ್ತಾ, ಸರ್ಕಾರದಿಂದ ಬಂದಿರುವ ಪತ್ರದನ್ವಯ (ಸರ್ಕಾರದ ಪತ್ರ ಸಂಖ್ಯೆ: ಇಡಿ35:ಇಜಿಒವಿ:2020 .ದಿನಾಂಕ:04-08-2020) UUCMS ತಂತ್ರಾಂಶವು ಸರ್ಕಾರದಿಂದ ಸಂಪೂರ್ಣ ಜಾರಿಯಾಗುವವರೆಗೆ ಸರ್ಕಾರದ ಅಧೀನದಲ್ಲಿ ಬರುವ ಯಾವುದೇ ವಿಶ್ವವಿದ್ಯಾಲಯ / ಕಾಲೇಜುಗಳಲ್ಲಿ ಹೊಸ ತಂತ್ರಾಂಶ ಖರೀದಿ ಮಾಡಬಾರದೆಂದು ತಿಳಿಸಿರುವ ಹಿನ್ನೆಲೆಯಲ್ಲಿ ತಂತ್ರಾಂಶಗಳನ್ನು ಖರೀದಿಸಲು ಬರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಕುಲಸಚಿವ(ಮೌಲ್ಯಮಾಪನ) ಇವರು ಉತ್ತರಿಸುತ್ತಾ, ಸರ್ಕಾರದಿಂದ ಅನುಮೋದನೆಯಾಗಿರುವ ತಂತ್ರಾಂಶಗಳು ಹಾಗೂ ಪರಿಕರಗಳನ್ನು ಖರೀದಿ ಮಾಡಲು ಅನುಮತಿ ನೀಡಲು ಆಗ್ರಹಿಸಿದರು. ಅದಕ್ಕೆ ಅನುಗುಣವಾಗಿ ಕುಲಸಚಿವರು(ಆಡಳಿತ) ಇವರು ಮಾತನಾಡುತ್ತಾ, UGC PUBLIC NOTICE ಪ್ರಕಾರ ODLಗೆ ಸಂಬಂಧಿಸಿದಂತೆ ಯಾವುದೇ Franchicies / Private Service Providerಗೆ ಕೊಡುವ ಹಾಗಿಲ್ಲವೆಂದು UGC-2018ರ ಮಾರ್ಗಸೂಚಿಯನ್ನು ಉಲ್ಲೇಖಿಸುತ್ತಾ ,ಇದಕ್ಕೆ ಅನುಗುಣವಾಗಿ 'SWAYAM' ಅಥವಾ ಯು.ಜಿ.ಸಿ.ಕೊಟ್ಟಿರುವ ಉಚಿತ ತಂತ್ರಾಂಶ ಉಪಯೋಗಿಸಿಕೊಳ್ಳಲು ತಿಳಿಸಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಚರ್ಚೆಯ ನಂತರ, ಸಭೆಯು ಸರ್ವಾನುಮತದಿಂದ ಪ್ರಸ್ತಾವನೆಯನ್ನು ಅಂಗೀಕರಿಸಿತು.

**2022-ಸಿಂ-8.30:** ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಸಂಶೋಧನಾರ್ಥಿಗಳ ಶಿಷ್ಯವೇತನ ದರವನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ:**
1. ಪ.ಜಾ: ಪ.ಪಂ.ಗಳ ಪಿ.ಹೆಚ್.ಡಿ ಸಂಶೋಧನಾರ್ಥಿಗಳ ಕಿರಿಯ ಶಿಷ್ಯವೇತನವನ್ನು ರೂ.20,000ಕ್ಕೆ ಹಾಗೂ ಹಿರಿಯ ಶಿಷ್ಯವೇತನವನ್ನು22,000ಕ್ಕೆ ಪರಿಷ್ಕರಿಸಲು ಸಭೆಯು ಅನುಮತಿಸಿತು. ಸದರಿ ದರಗಳು 01-09-2022ರಿಂದ ಜಾರಿಗೆ ತರಲು ನಿರ್ಣಯಿಸಲಾಯಿತು.
2. ಓ.ಬಿ.ಸಿ.ವರ್ಗದ ಸಂಶೋಧನಾರ್ಥಿಗಳ ಶಿಷ್ಯವೇತನವನ್ನು ರೂ.6000-00ದಿಂದ 12,000ಕ್ಕೆಹೆಚ್ಚಿಸಲು ಸಭೆಯು ತಾತ್ವಿಕವಾಗಿ ಅನುಮತಿಸಿತು. ಅನುದಾನದ ಲಭ್ಯತೆಯಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳು / ಕುಲಸಚಿವರಿಗೆ ಅಧಿಕಾರ ನೀಡಲಾಯಿತು.

## ಎಸ್ಟೇಟ್ ವಿಭಾಗ

**2022-ಸಿಂ-8.31:** ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ನಂದಿನಿ ಮಿಲ್ಕ್ ಪಾರ್ಲರ್‌ನ್ನು ತೆರೆಯಲು 15 x 12 ಅಡಿ ಅಳತೆಯ ಖಾಲಿ ಜಾಗವನ್ನು ನೀಡುವ ಬಗ್ಗೆ.

**ನಿರ್ಣಯ:** ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ಕಾಲೇಜು ಆವರಣದಲ್ಲಿ ನಂದಿನಿ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡುವ ಷರತ್ತಿಗೊಳಪಟ್ಟು ನಂದಿನಿ ಮಿಲ್ಕ್ ಪಾರ್ಲರ್‌ನ್ನು ತೆರೆಯಲು 15 x 12 ಅಡಿ ಅಳತೆಯ ಖಾಲಿ ಜಾಗವನ್ನು ನೀಡಲು ಸಭೆಯು ಅನುಮತಿಸಿತು.

**2022–ಸಿಂ–8.32:** ವಿಶ್ವವಿದ್ಯಾಲಯದ ಆವರಣದಲ್ಲಿರುವ ಬ್ಯಾಂಕ್‌ಗೆ ಮಾಹೆಯಾನ ಬಾಡಿಗೆಯನ್ನು ನಿಗದಿಪಡಿಸಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವರಿಗೆ ನವೆಂಬರ್–2022ರ ಮಾಹೆಯಿಂದ ರೂ.20,000–00 ಬಾಡಿಗೆ ದರದಲ್ಲಿ ಮುಂದುವರಿಸಲು ಅನುಮೋದಿಸಲಾಯಿತು. ಹಾಗೂ ಬಾಡಿಗೆ ದರವನ್ನು ಪ್ರತಿ 2 ವರ್ಷಕ್ಕೊಮ್ಮೆ ಶೇಕಡ 25ರಷ್ಟು ಹೆಚ್ಚಿಸಲು ಹಾಗೂ 6 ವರ್ಷದ ಅವಧಿಗೆ ಬಾಡಿಗೆಯನ್ನು ಮುಂದುವರಿಸಲು ಅನುಮೋದಿಸಲಾಯಿತು.

**2022–ಸಿಂ–8.32(ಎ):** ಸ್ವಚ್ಛತಾ ಕಾರ್ಯಕ್ಕೆ ಬೇಕಾಗುವ ಸ್ವಚ್ಛತಾ ಸಾಮಾಗ್ರಿ/ಇತರೆ ಪರಿಕರಗಳನ್ನು ಖರೀದಿಸುವ ಸಂಬಂಧ ಇರುವ ಇ–ಟೆಂಡರ್ ಅವಧಿಯನ್ನು ಮುಂದುವರೆಸುವ ಕುರಿತು.

**ನಿರ್ಣಯ :** ಇ–ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗಿನ ಅವಧಿಗೆ ಈಗಾಗಲೇ ಅನುಮೋದನೆಗೊಂಡ ದರದಲ್ಲಿಯೇ ಈ ಹಿಂದೆ ಸರಬರಾಜು ಮಾಡಿದ ಮೆ: ಮಲ್ಲೇಶ್ವರ ಪ್ರಿಂಟರ್ಸ್,ಭದ್ರಾವತಿ ಇವರೊಂದಿಗಿನ ದರ ಒಪ್ಪಂದದ ಅವಧಿಯನ್ನು ಮುಂದುವರಿಸಲು ಸಭೆಯು ಅನುಮತಿಸಿತು.

## ದೈಹಿಕ ಶಿಕ್ಷಣ

**2022–ಸಿಂ–8.32(ಬಿ):** ದೈಹಿಕ ಶಿಕ್ಷಣ ನಿರ್ದೇಶನಾಲಯದ ಇ–ಟೆಂಡರ್ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಕುರಿತು.

**ನಿರ್ಣಯ:** ದೈಹಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಅಗತ್ಯವಿರುವ ಕ್ರೀಡಾ ಸಾಮಗ್ರಿಗಳ ಖರೀದಿ ಕುರಿತಾದ ಇ–ಟೆಂಡರ್ ನಡಾವಳಿ ಮತ್ತು ಪ್ರಕ್ರಿಯೆಗಳನ್ನು ಸಭೆ ಅನುಮೋದಿಸಿತು.

**2022–ಸಿಂ–8.32(ಸಿ):** ಈಸೂರಿನಲ್ಲಿ ಆಯೋಜಿಸಿದ್ದ ಅಜಾದಿ ಕಾ ಅಮೃತ್ ಮಹೋತ್ಸವ ಕಾರ್ಯಕ್ರಮದ ವೆಚ್ಚವನ್ನು ಪಾವತಿಸಿರುವುದಕ್ಕೆ ಘಟನೋತ್ತರ ಅನುಮೋದನೆಗಾಗಿ.

**ನಿರ್ಣಯ:** ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಪತ್ರದನ್ವಯ ಈಸೂರಿನಲ್ಲಿ ತುರ್ತಾಗಿ ಆಯೋಜಿಸಿದ್ದ ಅಜಾದಿ ಕಾ ಅಮೃತ್ ಮಹೋತ್ಸವ ಕಾರ್ಯಕ್ರಮದಲ್ಲಿ ಮಾನ್ಯ ಕೇಂದ್ರ ಸಚಿವರು, ಮಾನ್ಯ ಮಾಜಿ ಮುಖ್ಯ ಮಂತ್ರಿಗಳು, ಹಾಗೂ ಮಾನ್ಯ ಸಂಸದರು ಮತ್ತು ಶಾಸಕರುಗಳು ಭಾಗವಹಿಸಿದ್ದು ಸದರಿ ಕಾರ್ಯಕ್ರಮದ ವೆಚ್ಚ ರೂ.16,52,114–00(ರೂಪಾಯಿ ಹದಿನಾರು ಲಕ್ಷ ಐವತ್ತೆರಡು ಸಾವಿರದ ಒಂದು ನೂರಾ ಹದಿನಾಲ್ಕು ಮಾತ್ರ) ಮೊತ್ತವನ್ನು ಸರ್ಕಾರದ ಅಧೀನ ಸಂಸ್ಥೆಯಾದ ನಿರ್ಮಿತಿ ಕೇಂದ್ರ, ಶಿವಮೊಗ್ಗ– ಇವರಿಗೆ ಪಾವತಿಸಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2022–ಸಿಂ–8.33:** **ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

**1. ಪ್ರೊ. ರಿಯಾಜ್ ಮಹಮೂದ್:** **ಪ್ರೊ. ರಿಯಾಜ್ ಮಹಮೂದ್** – ಇವರು ಮಾತನಾಡುತ್ತಾ , ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಜರುಗುವ ಸಭೆಗಳಿಗೆ ಆಗಮಿಸುವ ಬಾಹ್ಯ ಸದಸ್ಯರು / ಪರೀಕ್ಷಕರುಗಳಿಗೆ ನೀಡಲಾಗುತ್ತಿರುವ ಕಾರು ಮೈಲೇಜು ದರವು ತೀರಾ ಕಡಿಮೆ ಇದ್ದು,

ಇಂಧನದ ಬೆಲೆ ಹೆಚ್ಚಳವಾಗಿರುವುದರಿಂದ ಸಭೆಗಳಿಗೆ ಆಗಮಿಸಲು ನಿರಾಕರಿಸುತ್ತಿದ್ದಾರೆ ಎಂದು ಸಭೆಗೆ ವಿವರಿಸಿದರು.

ನಿರ್ಣಯ: ಚರ್ಚೆಯ ನಂತರ, ಈ ಕೆಳಕಂಡಂತೆ ಕಾರು ಮೈಲೇಜು ದರವನ್ನು ಪರಿಷ್ಕರಿಸಲು ನಿರ್ಣಯಿಸಲಾಯಿತು.

1.ಪಿ.ಹೆಚ್.ಡಿ.ಮೌಖಿಕ ಮೌಲ್ಯಮಾಪನ : (ಪ್ರತಿ ಕಿ.ಮೀ.ಗೆ –ರೂ:14–00)

2.ಡಾಕ್ಟರಲ್ ಸಮಿತಿ ಸಭೆ : (ಪ್ರತಿ ಕಿ.ಮೀ.ಗೆ –ರೂ:14–00)

3.ಅಧ್ಯಯನ ಮಂಡಳಿ ಸಭೆ : (ಪ್ರತಿ ಕಿ.ಮೀ.ಗೆ –ರೂ:14–00)

4.ಪರೀಕ್ಷಾ ಮಂಡಳಿ ಸಭೆ : (ಪ್ರತಿ ಕಿ.ಮೀ.ಗೆ –ರೂ:14–00)

5.ಪ್ರಾಜೆಕ್ಟ್ ಡಿಫೆಂಡಿಂಗ್ : (ಪ್ರತಿ ಕಿ.ಮೀ.ಗೆ –ರೂ:14–00)

6.ಪ್ರಾಯೋಗಿಕ ಪರೀಕ್ಷೆಗಳಿಗೆ : (ಪ್ರತಿ ಕಿ.ಮೀ.ಗೆ –ರೂ:14–00)

2. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ: **ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ** – ಇವರು ಕೆಳದಿ ಸಂಶೋಧನಾ ಕೇಂದ್ರದಲ್ಲಿ ಕ್ಯುರೇಟರ್ ನಿವೃತ್ತರಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರದ ಮೇಲುಸ್ತುವಾರಿ ನಿರ್ವಹಣೆಗೆ ಒಬ್ಬರನ್ನು ತಾತ್ಕಾಲಿಕವಾಗಿ ನೇಮಿಸಬೇಕೆಂದರು.

ಶ್ರೀ ನಟೇಶ್ – ಇವರು ಮಾತನಾಡುತ್ತಾ, ಸಹ್ಯಾದ್ರಿ ಕಲಾ ಕಾಲೇಜಿನ ಕನ್ನಡ / ಇತಿಹಾಸದ ಆಸಕ್ತ ಮತ್ತು ಸಾಮಾಜಿಕ ಕಳಕಳಿಯುಳ್ಳ ನಿಷ್ಠಾವಂತ ಪ್ರಾಧ್ಯಾಪಕ/ ಅಧ್ಯಾಪಕರೊಬ್ಬರನ್ನು ವಾರಕ್ಕೆ 1 ಅಥವಾ 2 ಬಾರಿ ಕೇಂದ್ರಕ್ಕೆ ನಿಯೋಜಿಸಿ ಅರ್ಥವತ್ತಾಗಿ ನಿರ್ವಹಣಾ ಕಾರ್ಯವನ್ನು ಕೈಗೊಳ್ಳಬೇಕೆಂದರು.

ನಿರ್ಣಯ: **ಈ ಬಗ್ಗೆ ಸಹ್ಯಾದ್ರಿ ಕಲಾ ಕಾಲೇಜಿನ ಪ್ರಿನ್ಸಿಪಾಲರೊಂದಿಗೆ ಕೂಲಂಕುಷವಾಗಿ ಸಮಾಲೋಚಿಸಿ ಆನಂತರ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಗಳು /ಕುಲಸಚಿವರಿಗೆ ಅಧಿಕಾರ ನೀಡಲಾಯಿತು.**

3.ಶ್ರೀ ರಾಮಲಿಂಗಪ್ಪ ಹೆಚ್. **.ಶ್ರೀ ರಾಮಲಿಂಗಪ್ಪ ಹೆಚ್** – ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿಯಾಗಿ 3 ತಿಂಗಳು ಕಳೆದರೂ ಸಹ ಶ್ರೀ ಎನ್.ಎಸ್. ಕರಿಯಪ್ಪ – ಅವರಿಗೆ ನಿವೃತ್ತಿ ವೇತನ ಇದುವರೆಗೂ ಮಂಜೂರಾಗಿರುವುದಿಲ್ಲ. ಆದ್ದರಿಂದ ಅವರ ಜೀವನ ನಿರ್ವಹಣೆ ಉದ್ದೇಶದಿಂದ ಈ ಬಗ್ಗೆ ತುರ್ತು ಗಮನ ಹರಿಸಬೇಕೆಂದರು. ಅವರ ಸೇವಾ ಗೊಂದಲಗಳಿದ್ದಲ್ಲಿ ಗಳಿಕೆ ರಜೆಯ ನಗದೀಕರಣದ ಭಾಗಶ: ಮೊತ್ತವನ್ನು ತಡೆಹಿಡಿದು ಮುಚ್ಚಳಿಕೆ ಪಡೆದು ನಿವೃತ್ತಿ ವೇತನ ಮಂಜೂರು ಮಾಡಬೇಕೆಂದರು.

ಶ್ರೀ ರಾಜಶೇಖರ್ ಹೆಬ್ಬಾರ್ – ಇವರು ಮಾತನಾಡುತ್ತಾ, ನಿವೃತ್ತ ಸಿಬ್ಬಂದಿಗಳಿಗೆ ವಿಳಂಬ ಮಾಡದೇ ನಿವೃತ್ತಿ ಉಪದಾನಗಳನ್ನು ಮಂಜೂರು ಮಾಡಬೇಕೆಂದರು. ಹಾಗೂ ಸೇವಾ ವಿಷಯದಲ್ಲಿ ಏನಾದರೂ ಗೊಂದಲವಿದ್ದಲ್ಲಿ ಮುಚ್ಚಳಿಕೆ ಪಡೆದು , ತಾತ್ಪೂರ್ತಿಕ ನಿವೃತ್ತಿ ವೇತನವನ್ನಾದರೂ ಮಂಜೂರು ಮಾಡಬೇಕೆಂದು , ಇಲ್ಲವಾದಲ್ಲಿ ಕಾನೂನಿನ ತೊಡಕನ್ನು ಎದುರಿಸಬೇಕಾಗುತ್ತದೆಂದು ವಿವರಿಸಿದರು.

ನಿರ್ಣಯ: **ಚರ್ಚೆಯ ನಂತರ ವಯೋನಿವೃತ್ತಿ ಹೊಂದಿದ ದಿನಾಂಕಕ್ಕೆ ಇದ್ದಂತೆ ಮೂಲವೇತನವನ್ನಾಧರಿಸಿ ನಿವೃತ್ತಿ ವೇತನ ಮಂಜೂರು ಮಾಡಲು , ಹಾಗೂ ಉಳಿದ ಸೌಲಭ್ಯಗಳನ್ನು ಪ್ರಕರಣ ಇತ್ಯರ್ಥವಾದ ನಂತರ ಮಂಜೂರು ಮಾಡಲು ಸಭೆಯು ಅನುಮತಿಸಿತು.**

4. ಶ್ರೀಧರ್ಮಪ್ರಸಾದ್: ಪ್ರೊ: ರವೀಂದ್ರ ಗಡ್ಕರ್ ಇವರು ನಿವೃತ್ತರಾಗಿ 2 ವರ್ಷಗಳಾದರೂ ಅವರಿಗೆ

ಲಭ್ಯವಿರುವ ನಿವೃತ್ತಿ ಉಪದಾನಗಳು ಮಂಜೂರಾಗಿರುವುದಿಲ್ಲ. ಪ್ರೊ: ಗುಂಜಾಳ್ ಅವರ ಪ್ರಕರಣ ಹಾಗೂ ಪ್ರೊ: ರವೀಂದ್ರ ಗಡ್ಕರ್ – ಇವರುಗಳ ಪ್ರಕರಣ ಒಂದೇ ಆಗಿದ್ದು, ಪ್ರೊ: ಗುಂಜಾಳ್ ಅವರಿಗೆ ನೀಡಲಾದಂತೆ ಎಲ್ಲಾ ಉಪದಾನಗಳನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕೆಂದರು.

ಕುಲಸಚಿವರು ಉತ್ತರಿಸುತ್ತಾ, ಸದರಿ ಪ್ರಾಧ್ಯಾಪಕರಿಗೆ ಈಗಾಗಲೇ ಹಿಂಬರಹ ನೀಡಲಾಗಿದೆ. ಹಾಗೂ ಎನ್.ಪಿ.ಎಸ್ / ಓ.ಪಿ.ಎಸ್.ಗೆ ಬರುವುದರ ವಿಷಯದಲ್ಲಿ ಸಾಕಷ್ಟು ಗೊಂದಲವಿದೆ. ಈ ಬಗ್ಗೆ ಕೂಲಂಕುಷ ಪರಿಶೀಲನೆ ಮಾಡಿ ನಂತರ ಕ್ರಮ ಕೈಗೊಳ್ಳಬೇಕಾಗಿದೆಯೆಂದರು.

**ನಿರ್ಣಯ: ಚರ್ಚೆಯ ನಂತರ ಈ ಬಗ್ಗೆ ಮತ್ತೊಮ್ಮೆ ಕೂಲಂಕುಷ ಪರಿಶೀಲನೆ ಮಾಡಿ ನಂತರ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳು / ಕುಲಸಚಿವರಿಗೆ ಅಧಿಕಾರ ನೀಡಲಾಯಿತು.**

**2022–ಸಿಂ–8.34: ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇರುವುದಿಲ್ಲ.**

**2022–ಸಿಂ–8.35: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

ಅಂತಿಮವಾಗಿ ಸಭೆಗೆ ಭೌತಿಕವಾಗಿ ಮತ್ತು ಆನ್ ಲೈನ್‌ನಲ್ಲಿ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ನಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು